# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



NOW HAMPI TIMES E-PAPER HAS BEEN REACHED
50,000
Plus readers
Place Your Ads here
Reach New Audience
9448633038 Contact For: News, Events Coverage, Ads
hampitimes@gmail.com Valmiki Circle, Hosapete-583201



ಸಂಪುಟ:01 Volume:01 • ಸಂಚಿಕೆ:269 Issue:269 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 22.03.2024 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



॥ ಶ್ರೀ ಗುರು ಬಸವಲಿಂಗಾಯ ನಮಃ ॥
ಪೂಜ್ಯ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ
ಪೂಜ್ಯ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರ ಪಾವನಸಾನಿಧ್ಯದಲ್ಲಿ
ಸರ್ವಧರ್ಮ ದರ್ಶನ ಪ್ರವಚನ – 2024
ಸ್ಥಳ: ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠ, ಹೊಸಪೇಟೆ,
ದಿನಾಂಕ: 21-03-2024 ರಿಂದ 31-03-2024ರವರೆಗೆ, ಸಮಯ: ಸಂಜೆ 7.00 ರಿಂದ 8.30ರವರೆಗೆ
* * * * * * ಸರ್ವ ಧರ್ಮಿಯರ ಬರವೆಮಗೆ ಪ್ರಾಣ ಜೀವಾಳವಯ್ಯ * * * * * *


## ಮೈಕ್ರೋ ನ್ಯೂಸ್

### ಶ್ರೀಕೊಟ್ಟೂರುಸ್ವಾಮಿ ಮಠದಲ್ಲಿ ಷಟ್‌ಸ್ಥಲ ಧ್ವಜಾರೋಹಣ

**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠದ ಸರ್ವಧರ್ಮ ಸಮನ್ವಯ ರಥೋತ್ಸವ-2024 ರ ಅಂಗವಾಗಿ ಗುರುವಾರ ಶ್ರೀಮಠದಲ್ಲಿ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳವರ ಸನ್ನಿಧಾನದಲ್ಲಿ ಷಟ್ ಸ್ಥಲ ಧ್ವಜಾರೋಹಣ ಕಾರ್ಯಕ್ರಮವನ್ನು ಶ್ರೀ ನಿರಂಜನಪ್ರಭು ಮಹಾಸ್ವಾಮಿಗಳು ನೆರವೇರಿಸಿದರು.

ದರೂರು ಶ್ರೀ ಕೊಟ್ಟೂರು ಸ್ವಾಮಿಗಳು ಧ್ವಜಾರೋಹಣ ಗೀತೆ ಪ್ರಸ್ತುತಪಡಿಸಿದರು. ಶ್ರೀ ಸಿದ್ದಲಿಂಗ ದೇಶಿಕರು, ಶ್ರೀ ಮರಿಕೊಟ್ಟೂರು ದೇಶಿಕರು, ಶ್ರೀ ಸಿದ್ದೇಶ್ವರ ದೇಶಿಕರು ಉಪಸ್ಥಿತರಿದ್ದರು. ಶ್ರೀ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರದ ಪ್ರಧಾನ ಕಾರ್ಯದರ್ಶಿ ಸಾಲಿ ಸಿದ್ದಯ್ಯಸ್ವಾಮಿ, ಸಮಾಜದ ಹಿರಿಯ ಮುಖಂಡರಾದ ಹೆಚ್.ವಿ.ಶರಣಸ್ವಾಮಿ, ಕೆ ಗಂಗಾಧರ್, ಗೊಗ್ಗ ಚನ್ನಬಸವರಾಜ, ಕೆ.ಕೊಟ್ರೇಶ, ಜಾಲಿ ಪ್ರಕಾಶ, ಮೆಟ್ರಿ ಮಲ್ಲಿಕಾರ್ಜುನ ಹಾಗೂ ವೀರಶೈವ ಲಿಂಗಾಯತ ಸಮಾಜದ ಮುಖಂಡರಿದ್ದರು.

### ಕಾರು ಪಲ್ಟಿ ಇಬ್ಬರು ಸಾವು

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಮೊರಬ ಗ್ರಾಮದ ರಾ.ಹೆ.50ರಲ್ಲಿ ಗುರುವಾರ ಬೆಳಗಿನ ಜಾವ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿ ಇಬ್ಬರು ಸಾವನ್ನಪ್ಪಿರುವ ಘಟನೆ ನಡೆದಿದೆ. ದುರ್ಘಟನೆಯಲ್ಲಿ ರಾಜು(36), ಕರಣ್(17) ಸಾವಿಗೀಡಾಗಿದ ದುರ್ದೈವಿಗಳು. ಅಭಿಷೇಕ, ಅಪ್ಪು ಉಳಿದ ಈ ಇಬ್ಬರನ್ನು ಸ್ಥಳೀಯ ಸಾರ್ವಜನಿಕ ಆಸ್ಪತ್ರೆಗೆ ದಾಖಲುಮಾಡಲಾಗಿದೆ. ಬಾಗಲಕೋಟೆಯ ಜಿಲ್ಲೆಯವರಾದ ಇವರು ಕಾರ್ಯನಿಮಿತ್ತ ಬೆಂಗಳೂರಿನಿಂದ ಅಮೀನಗಡಕ್ಕೆ ಹೋಗುವಾಗ ಈ ದುರ್ಘಟನೆ ನಡೆದಿದೆ. ಪ್ರಕರಣ ಕೂಡ್ಲಿಗಿ ಪೋಲಿಸ್ ಠಾಣೆಯಲ್ಲಿ ದಾಖಲಾಗಿದೆ.


ವಿಜಯನಗರ ಜಿಲ್ಲೆಯ
ಸಮಗ್ರ ಸುದ್ದಿಗಾಗಿ
ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ
ಸುದ್ದಿ ಮತ್ತು ಜಾಹೀರಾತಿಗಾಗಿ
ಸಂಪರ್ಕಿಸಿ
ಮೊ: 9448633038



ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ
ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್‌ಎಸ್‌ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ.
ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ
98441 25317
99861 33299


# ಕೆರೆಗಳೆ ಬದುಕಿನ ಉಸಿರು

## ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿಕೆ | ಕರ್ನಾಟಕ ಐತಿಹಾಸಿಕ ಪರಂಪರೆ ಉಳಿಸಿ ಉದ್ಘಾಟನೆ

## ಕೆರೆ ನಿರ್ಮಾಣದಲ್ಲಿ ವಿಜಯನಗರ ಅರಸರ ಕೊಡುಗೆ ಅಪಾರ | ಕೆರೆಗಳ ಪಿತಾಮಹ ಬಯಕಾರ ರಾಮಪ್ಪಯ್ಯ

**ಹಂಪಿ ಟೈಮ್ಸ್ ಹೊಸಪೇಟೆ**

ದಕ್ಷಿಣ ಭಾರತದಾದ್ಯಂತ ಅತಿ ಹೆಚ್ಚು ಕೆರೆಗಳನ್ನು ನಿರ್ಮಿಸಿದ ಕೀರ್ತಿ ವಿಜಯನಗರದ ಅರಸರಿಗೆ ಸಲ್ಲುತ್ತದೆ. ಕರ್ನಾಟಕ ಚರಿತ್ರೆಯಲ್ಲಿ ಅತಿ ಹೆಚ್ಚು ಶಾಸನಗಳನ್ನು ಇಡೀ ದಕ್ಷಿಣ ಭಾರತದಾದ್ಯಂತ ಹಾಕಿಸಿರುವವರು ವಿಜಯನಗರ ಸಾಮ್ರಾಜ್ಯದ ಅರಸರು ಎಂದು ಕನ್ನಡ ವಿ.ವಿ. ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಹೇಳಿದರು.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಚಿಕ್ಕಕೆರೆಯಾಗಿನಹಳ್ಳಿ ಕೆರೆಕಟ್ಟೆಯ ಬಳಿ ಕನ್ನಡ ವಿವಿ ಶಾಸನಶಾಸ್ತ್ರ ವಿಭಾಗ, ಕರ್ನಾಟಕ ಇತಿಹಾಸ ಅಕಾಡೆಮಿ ಹಾಗೂ ಚಿಕ್ಕಕೆರೆಯಾಗಿನಹಳ್ಳಿ ಮತ್ತು ಬಿ.ಬಿ.ತಾಂಡಾ ಗ್ರಾಮಸ್ಥರ ಸಹಯೋಗದೊಂದಿಗೆ ಕರ್ನಾಟಕ ಐತಿಹಾಸಿಕ ಪರಂಪರೆ ಉಳಿಸಿ ಕಾರ್ಯಕ್ರಮವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದರು.

ಈ ಚಿಕ್ಕಕೆರೆಯಾಗಿನಹಳ್ಳಿ ಶಾಸನದಲ್ಲಿ ತನ್ನ ತಾಯಿಯ ಹೆಸರಿನಲ್ಲಿ ಬಯಕಾರ ರಾಮಪ್ಪಯ್ಯ ಲಕ್ಕಸಮುದ್ರ ಎನ್ನುವ ಕೆರೆಯನ್ನು ನಿರ್ಮಿಸಿದ. ಅಲ್ಲದೇ ಜೀವಿತಾವಧಿಯಲ್ಲಿ 25ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಾಣ ಮಾಡಿದ್ದಾನೆ. ಕಾರಣ ಈ ಪರಿಸರದಲ್ಲಿ ಮಳೆಯ ಪ್ರಮಾಣ ಬಹಳ ಕಡಿಮೆ. ಆದ್ದರಿಂದ ಜನರಿಗೆ ನೀರಿನ ಸೌಲಭ್ಯವನ್ನು ಕಲ್ಪಿಸುವುದಕ್ಕೆ ಬಯಕಾರ ರಾಮಪ್ಪಯ್ಯ ಕೆರೆಯ ಮಹತ್ವವನ್ನು ಅರಿತು ತಮ್ಮ ಕುಟುಂಬದವರ ಹೆಸರಿನಲ್ಲಿ ಕೆರೆ-ಬಾವಿಗಳನ್ನು ನಿರ್ಮಿಸಿದ. ವಿಜಯನಗರ ಸಾಮ್ರಾಜ್ಯದ ಮಂತ್ರಿಯಾದ ಬಯಕಾರ ರಾಮಪ್ಪನು ಕ್ರಿ.ಶ.1539ರಲ್ಲಿ ನಿರ್ಮಿಸಿದ ಶಾಸನವಿದು.



ಇಂದು ವಿದ್ಯಾವಂತರಾಗುತ್ತಿದ್ದರೂ ಕೆರೆಗಳ ನಿರ್ಮಾಣದ ಮಹತ್ವವನ್ನು ಅರಿಯದಂತಾಗಿದ್ದಾರೆ.ನಗರ ಪ್ರದೇಶದ ನೂರಾರು ಕೆರೆಗಳು ಮನುಷ್ಯನ ದುರಾಸೆಗೆ ಬಲಿಯಾಗಿವೆ. ನೀರಿನ ಮೂಲಸೆಲೆಯಾದ ಕೆರೆಗಳು ಹಾಳಾದರೆ ಗ್ರಾಮೀಣ ಮಟ್ಟದಲ್ಲಿ ಅಂತರ್ಜಲ ಕುಸಿಯುತ್ತಿದೆ. ವ್ಯವಸಾಯಕ್ಕೆ ನೀರಿನ ಅಭಾವ ಉಂಟಾಗುವುದನ್ನು ಅರಿತು ತನ್ನ ಪ್ರದೇಶದ ವ್ಯಾಪ್ತಿಯಲ್ಲಿ ಅಂದರೆ ಕೂಡ್ಲಿಗಿ, ಸಂಡೂರು, ಹೊಸಪೇಟೆ, ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳ ಭೂಭಾಗದಲ್ಲಿ 25ಕ್ಕೂ ಹೆಚ್ಚು ಕೆರೆಗಳನ್ನು ನಿರ್ಮಿಸಿದ ಕೀರ್ತಿ ಬಯಕಾರ ರಾಮಪ್ಪನಿಗೆ ಸಲ್ಲುತ್ತದೆ.

ಬಯಕಾರ ರಾಮಪ್ಪನನ್ನು ಕೆರೆಗಳ ಪಿತಾಮಹ ಎಂದು ಕರೆದರೆ ತಪ್ಪಾಗಲಾರದು. ಕೆರೆಗಳ ನಿರ್ಮಾಣ ಮಾಡಿದರೆ ಮುಂದಿನ ಜನಾಂಗ ಸುಖವಾಗಿರುತ್ತದೆ ಎಂಬ ಪೂರ್ವಾಲೋಚನೆ ಬಯಕಾರ ರಾಮಪ್ಪನಿಗೆ ಇತ್ತು. ಆದ್ದರಿಂದ ವಿಜಯನಗರ ಆಳ್ವಿಕೆ ಕಾಲದಲ್ಲಿ ಅತ್ಯುತ್ತಮ ಅಧಿಕಾರಿಗಳು ಇದ್ದುದ್ದಕ್ಕೆ ವಿಜಯನಗರ ಅರಸರಿಗೆ ಕೀರ್ತಿ ಪ್ರಾಪ್ತವಾಯಿತು. ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮಾಡುತ್ತ ಮುಂದಿನ ತಲೆಮಾರಿನವರಿಗೆ ಉಳಿಸಲು ನಮ್ಮ ಯುವಕರಿಗೆ, ಶಾಲಾ ವಿದ್ಯಾರ್ಥಿಗಳಿಗೆ ಶಾಸನಗಳ ಮಹತ್ವವೇನು ಮತ್ತು ಪೂರ್ವಿಕರು ಮಾಡಿದ ಸಮಾಜಮುಖಿ ಕಾರ್ಯಗಳ ಕುರಿತು ತಿಳಿಸಬೇಕಾಗುತ್ತದೆ. ಇಂತಹ ಮಹನೀಯರು ನಮ್ಮ ಕರ್ನಾಟಕವನ್ನು ಆಳ್ವಿಕೆ ಮಾಡಿದ್ದರಿಂದ ಕರ್ನಾಟಕವು ಸಾಂಸ್ಕೃತಿಕವಾಗಿ ಸುವ್ಯವಸ್ಥಿತ ಉನ್ನತ ಸ್ಥಾನವನ್ನು ಹೊಂದಲಿಕ್ಕೆ ಸಾಧ್ಯವಾಯಿತು ಎಂದು ಜನರಲ್ಲಿ ಅರಿವು ಮೂಡಿಸಿದರು.

ಶಾಸನಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಅಮರೇಶ ಯತಗಲ್ ಮಾತನಾಡಿ, ಬಯಕಾರ ರಾಮಪ್ಪಯ್ಯನವರ ಜನೋಪಯೋಗಿ ಕಾರ್ಯಗಳ ಮೂಲಕ ಗುರುತಿಸುವಂತವರು. ಅವರ ಜನಮುಖಿ ಕಾರ್ಯಗಳು ನಮ್ಮ ಮುಂದಿವೆ. ನಮ್ಮ ಮಧ್ಯೆಯಿರುವ ಸ್ಮಾರಕಗಳು, ಶಾಸನಗಳು, ಹಾಳಾಗುತ್ತಿವೆ. ಅವುಗಳ ಸಂರಕ್ಷಣೆ ಆಗಬೇಕಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕೆ.ಆರ್. ನರಸಿಂಹನ್ ಅವರು ಬಯಕಾರ ರಾಮಪ್ಪನ ಕೆರೆಗಳ ನಿರ್ಮಾಣದ ಬಗ್ಗೆ ತಿಳಿಸಿದರು. ಅಲ್ಲದೆ ಅವನು ಜಗತ್ಪ್ರಸಿದ್ಧ ಸಂಗೀತ ಗ್ರಂಥವನ್ನು ರಚಿಸಿರುವುದರ ಕುರಿತು ತಿಳಿಸಿದರು. ಧನಪಾಲ್ ಶಾಸನ ಸಂರಕ್ಷಣೆ ಕಾರ್ಯದಲ್ಲಿ ನೆರವಾದರು.

ಟಿ.ಎಂ. ಬಸವರಾಜ, ಡಾ.ಆರ್. ಯುವರಾಜ್, ಡಿ. ವೀರೇಶ್, ಲಿಂಬ್ಯಾನಾಯ್ಕ, ಶಶಿಕುಮಾರ್ ನಾಯ್ಕ, ಓಬಯ್ಯನಾಯಕ, ಪಂಪಣ್ಣ ಓ. ಶಂಕ್ರಪ್ಪ ಬಾರಕೇರ, ಬಿ.ಬಿ. ತಾಂಡಾ ಹಾಗೂ ಚಿಕ್ಕಕೆರೆಯಾಗಿನಹಳ್ಳಿ ಗ್ರಾಮಸ್ಥರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ದೈವತ್ವದ ಬಲಕ್ಕಾಗಿ ಪ್ರವಚನ ಆಲಿಸಿ

## ಜಗದ್ಗುರು ಬಸವಲಿಂಗ ಶ್ರೀಗಳು ಆಶೀರ್ವಚನ | ಅಜ್ಞಾನವಿದ್ದಲ್ಲಿ ದುಃಖವೂ ಹೆಚ್ಚು

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದಲ್ಲಿ ಶೈಕ್ಷಣಿಕ ಪ್ರಗತಿಗೆ ಲಿಂಗಾಯತ ಮಠಗಳು ಕೊಡುಗೆ ಅಪಾರ. ಇತ್ತೀಚೆಗೆ ಬದಲಾವಣೆಯಾಗುತ್ತಿರುವ ಸರ್ಕಾರಗಳ ಯೋಜನೆಗಳಿಂದ ಶೈಕ್ಷಣಿಕ ಪ್ರಗತಿಗೆ ಕುಂಠಿತಗೊಳ್ಳುತ್ತಿರುವುದು ಖೇಧಕರ ಎಂದು ಜಗದ್ಗುರು ಶ್ರೀ ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಹೇಳಿದರು.

ನಗರದ ಶ್ರೀ ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವಧರ್ಮ ಪ್ರವಚನ ಪ್ರಾರಂಭೋತ್ಸವದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಬೋರ್ಡ್ ಪರೀಕ್ಷೆಗೆ ಸರ್ಕಾರಗಳಲ್ಲೆ ಪರವಿರೋಧ ನಿಲುವುಗಳಿಂದ ಮಕ್ಕಳ ಭವಿಷ್ಯ ಅತಂತ್ರ ಸ್ಥಿತಿಗೆ ತಲುಪವ ಆತಂಕ ಎದುರಾಗಿದೆ. ಶೈಕ್ಷಣಿಕ ಕ್ರಾಂತಿ ಮಠಗಳಿಂದಾಗಿದೆ. ಇಂದಿಗೂ ಸರ್ಕಾರಿ ಕನ್ನಡ ಶಾಲೆಗಳು ಶೋಚನೀಯ ಸ್ಥಿತಿಯಲ್ಲಿವೆ. ಸ್ವಾರ್ಥ ಸಾಧನೆಗೆ ಯೋಜನೆಗಳನ್ನು ರೂಪಿಸುವುದನ್ನು ಬದಿಗೊತ್ತಿ ಮಕ್ಕಳ ಭವಿಷ್ಯ ರೂಪಿಸುವ ಸಂಸ್ಕಾರಯುತ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಜಾತಿ ಧರ್ಮ ಕೋಮುತನದ ವಿಶಮ ವಾತವರಣ ಸೃಷ್ಠಿಸುವುದು ತರವಲ್ಲ. ಎಲ್ಲಾ ಧರ್ಮಗಳ ಸಾರ ಒಂದೇಯಾಗಿರುವುದರಿಂದ ಲಿಂಗೈಕ್ಯ ಡಾ.ಸಂಗನಬಸವ ಮಹಾಸ್ವಾಮಿಗಳು ಸರ್ವಧರ್ಮ ಸಮನ್ವಯ ರಥೋತ್ಸವನ್ನು ವಿಜಯನಗರಲ್ಲಿ ಆರಂಭಿಸಿದರು. ಶ್ರೀಮಠದಲ್ಲಿ ಮಾ.21 ರಿಂದ ಆರಂಭಗೊಂಡ ಪ್ರವಚನ ಮಾ.31ವರಗೆ ನಡೆಯಲಿದೆ. ಪ್ರವಚನಗಳು ದೈವತ್ವದ ಕಡೆ ಕರೆದೊಯ್ಯಲಿವೆ. ದೇವರನ್ನು ಕಾಣುವ ಭಕ್ತಿ ಮಾರ್ಗಗಳು, ಆಚರಣೆಗಳು ಬೇರೆ ಬೇರೆಯಾಗಿದ್ದರೂ ಭಾವನೆಗಳು ಒಂದೇ ಆಗಿರುತ್ತವೆ. ತ್ಯಾಗದಿಂದ ಮುಕ್ತಿ ಎಂಬುದೇ ವಿಶ್ವಧರ್ಮದ ಸಂದೇಶವಾಗಿದೆ. ಪರಸ್ಪರ ಭ್ರಾತೃತ್ವ, ಸ್ನೇಹಗಳಿಂದ ಸರ್ವರನ್ನು ಕಾಣಬೇಕು. ಪ್ರವಚನ ಕೇಳುವುದರಿಂದ ನಮ್ಮೊಳಗಿನ ಅಜ್ಞಾನ ದೂರಾಗುತ್ತದೆ. ಅಜ್ಞಾನವಿದ್ದಲ್ಲಿ ದುಃಖವೂ ಹೆಚ್ಚಿರುತ್ತದೆ ಎಂಬುದುನ್ನು ಪ್ರತಿಯೊಬ್ಬರು ತಿಳಿಯಬೇಕು ಎಂದರು.



ಬಳ್ಳಾರಿ ವಿದ್ಯಾವರ್ಧಕ ಸಂಘಕ್ಕೆ ಶ್ರೀ ಕೊಟ್ಟೂರುಸ್ವಾಮಿ ಮಠದ ಕೊಡುಗೆ ಅಪಾರ. ಬಡಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ವಿವಿ ಸಂಘಕ್ಕೆ 1953ರಲ್ಲೆ 464 ಎಕರೆ ಭೂಮಿಯನ್ನು ಹಿರಿಯ ಶ್ರೀಗಳು ಭೂದಾನ ಮಾಡಿದ್ದಾರೆ. ರಾಜ್ಯದಲ್ಲಿ ಐದು ಸಂಸ್ಥೆಗಳಿಗೆ ಜೋಳಿಗೆಗೆ ಬಂದ ಕಾಣಿಕೆಯನ್ನು ನೀಡಿ ಶೈಕ್ಷಣಿಕ ಪ್ರಗತಿಗೆ ಕಾರಣದಾರ ಹಾನಗಲ್ ಶ್ರೀಗಳ ಸ್ಮರಣೆ ಅಗತ್ಯ ಎಂದರು.

ದರೂರು ಶ್ರೀ ಸಂಗನಬಸವೇಶ್ವರ ಮಠದ ಕೊಟ್ಟೂರು ಮಹಾಸ್ವಾಮಿಗಳು ಉದ್ಘಾಟಿಸಿದರು. ಶಾಖಾ ಮಠಗಳಾದ ಸೋಮಸಮುದ್ರದ ಸಿದ್ದಲಿಂಗ ದೇಶೀಕರು, ಶ್ರೀಧರಗಡ್ಡೆಯ ಮರಿಕೊಟ್ಟೂರು ದೇಶಿಕರು, ಬೂದಗುಂಪದ ಸಿದ್ಧೇಶ್ವರ ದೇಶಿಕರು, ವ್ಯಾಕರನಾಳದ ವಿಶ್ವೇಶ್ವರ ದೇವರು, ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ರಾಮನಗೌಡ್ರು, ಸಂಘಕ್ಕೆ ನೂತನವಾಗಿ ಚುನಾಯಿತರಾದ ಕೆ.ಕೊಟ್ರೇಶ, ಜಾಲಿ ಪ್ರಕಾಶ, ಮಲ್ಲಿಕಾರ್ಜುನ ಮೆಟ್ರಿ ಉಪಸ್ಥಿತರಿದ್ದರು.



# ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರದ ಸುತ್ತಲು ನಿರ್ಬಂಧ ಪ್ರದೇಶ

**ಹಂಪಿ ಟೈಮ್ಸ್ ಹೊಸಪೇಟೆ**

2023-24ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಎಸ್.ಎಸ್.ಎಲ್.ಸಿ ಪರೀಕ್ಷೆಯು ವಿಜಯನಗರ ಜಿಲ್ಲೆಯಾದ್ಯಂತ ಮಾ.25 ರಿಂದ ಏ.06ರವರೆಗೆ ಜರುಗಲಿದ್ದು ಈ ಪರೀಕ್ಷೆಗಳು ಸುಗುಮವಾಗಿ ನಡೆಯುವ ಸಲುವಾಗಿ ಮತ್ತು ಪ್ರತಿ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಬರುವ ಹಿತದೃಷ್ಟಿಯಿಂದ ಮತ್ತು ಪ್ರತಿ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಆವರಣವನ್ನು ನಿರ್ಭಂದಿತ ಪ್ರದೇಶವೆಂದು ಘೋಷಿಸುವುದು ಹಾಗೂ ಜೆರಾಕ್ಸ್, ಕಂಪ್ಯೂಟರ್, ಸೈಬರ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ನಿರ್ಬಂಧಿತ ಪ್ರದೇಶವೆಂದು ಘೋಷಿಸುವುದು ಅಗತ್ಯವೆಂದು ಮನಗಂಡು ಸಿ.ಆರ್.ಪಿ.ಸಿ ಕಾಯ್ದೆ 1973ರ ಕಲಂ 144 ರನ್ವಯ ಪ್ರದತ್ತವಾದ ಅಧಿಕಾರದನ್ವಯ ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳೆಂದು ನಿಗದಿಪಡಿಸಲ್ಪಟ್ಟ ಕಟ್ಟಡಗಳ ಸುತ್ತಲೂ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಹಾಗೂ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸದಂತೆ ಮತ್ತು ಸದರಿ ಪರೀಕ್ಷೆಗಳಲ್ಲಿ ನಡೆಯಬಹುದಾದ ಅವ್ಯವಹಾರಗಳನ್ನು ತಡೆಗಟ್ಟುವ ಸಂಬಂಧ ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಹಾಗೂ ಜೆರಾಕ್ಸ್, ಕಂಪ್ಯೂಟರ್ ಸೈಬರ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ನಿರ್ಬಂಧಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

# ಕೋಟೆ ವೀರಭದ್ರೇಶ್ವರ ಗುಗ್ಗಳ



ಕೊಟ್ಟೂರು ಪಟ್ಟಣದ ಕೋಟೆ ವೀರಭದ್ರೇಶ್ವರ ಸ್ವಾಮಿಯ ಅಗ್ನಿ ಕುಂಡ ಆರಾಧನೆ ಹಾಗೂ ಗುಗ್ಗಳ ಮೆರವಣಿಗೆ ಗುರುವಾರ ಬೆಳಿಗ್ಗೆ ಸಾವಿರಾರು ಭಕ್ತಸ್ತೋಮದಲ್ಲಿ ಸಂಭ್ರಮದಿಂದ ನೆರವೇರಿತು.

## ವಚನ ಅರಿವು

## ಬಯಕೆ ಸವೆಯಬೇಕು

**ತನುವ ಕರಗಿಸಿ, ಹರಿವ ಮನವ ನಿಲಿಸಿ,**
**ಅಂಗಗುಣವ ಅಳಿದು, ಲಿಂಗಗುಣವ ನಿಲಿಸಿ,**
**ಭಾವವಳಿದು, ಬಯಕೆ ಸವೆದು,**
**ಮಹಾದೇವನಾದ ಶರಣರ**
**ಜಗದ ಮಾನವರೆತ್ತ ಬಲ್ಲರು,**
**ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.**

**– ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ**

ದೇಹದ ಮೇಲಿನ ಮೋಹವನ್ನು ಕರಗಿಸಿ, ಭ್ರಾಂತಿಯನ್ನು ಕಳೆದುಕೊಳ್ಳಬೇಕು. ಮನಸ್ಸು ಆಸೆ, ಆಮಿಷೆಗಳಿಗೆ ಸೋತು, ಅದರತ್ತ ಹರಿಯುವುದನ್ನು ಹಿಡಿದು ನಿಲ್ಲಿಸಬೇಕು. ಮನಸ್ಸು, ಹರಿದಂತೆ ಸಾಗುವ ದೇಹದ ಗುಣವನ್ನು ಅಳಿಯಬೇಕು. ಕಾಮಾದಿ ಬಯಕೆಗೆ ದೇಹ ಬಳಲದೆ ಮೀರುವ ಶಕ್ತಿಗಳಿಸಬೇಕು. ಅಂಗದ ಮೇಲೆ ಲಿಂಗಧರಿಸಿ, ಮನಸ್ಸಿನಲ್ಲಿ ಲಿಂಗತತ್ವ, ಶರಣರು ತಿಳಿಸಿದ ತಿಳುವಳಿಕೆಯನ್ನು ಒಪ್ಪಿ, ಅಪ್ಪಿ ಜೀವನಕ್ಕೆ ಅಳವಡಿಸಿಕೊಳ್ಳಬೇಕು. ಭಾವನೆಗಳೆಲ್ಲ ಶುದ್ಧವಾಗಬೇಕು. ಚಂಚಲತೆ, ಮೋಸ, ವಂಚನೆ, ಆಸೆ, ಆಮಿಷಗಳನ್ನು ಬಿಟ್ಟರೆ ಆತನೆ ಶರಣನಾಗುತ್ತಾನೆ. ಮನವನ್ನು ತಿಳಿಗೊಳಿಸದೆ, ಲೌಕಿಕ ಸುಖಕ್ಕೆ ಮೀಸಲಾಗಿ ಬದುಕಿದರೆ ಶರಣರ ನಿಲುವು ನಿಮಗೆ ತಿಳಿಯುವುದಿಲ್ಲ ಎನ್ನುತ್ತಾಳೆ ಶರಣೆ ಲಿಂಗಮ್ಮ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## 472.01 ಲೀ. ಮದ್ಯ, 26.33 ಕೆ.ಜಿ ಬೆಳ್ಳಿ, 3.55 ಲಕ್ಷ ನಗದು ವಶಕ್ಕೆ: ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಮಾಹಿತಿ

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಜಿಲ್ಲೆಯಾದ್ಯಂತ ಚೆಕ್‌ಪೋಸ್ಟ್‌ಗಳಲ್ಲಿ ಬಿಗಿಭದ್ರತೆಯಿಂದ ಕಾರ್ಯಾಚರಣೆ ನಡೆಯುತ್ತಿದ್ದು, ಬುಧವಾರದಂದು ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಅನಧೀಕೃತವಾಗಿ ಸಾಗಿಸುತ್ತಿದ್ದ 472.01 ಲೀಟರ್ (ಅಂದಾಜು ರೂ.1,85,378 ಮೌಲ್ಯ) ಮದ್ಯ, 26.33 ಕೆ.ಜಿ. ಬೆಳ್ಳಿ (ರೂ.7,37,240 ಬೆಲೆ) ಮತ್ತು ಸೂಕ್ತ ದಾಖಲೆಯಿಲ್ಲದ ರೂ.3,55,500 ನಗದು ಹಣ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಅದೇರೀತಿಯಾಗಿ 12,000 ಕೆ.ಜಿ (ರೂ.4956500 ಮೌಲ್ಯದ) ಮೈಲ್ಡ್ ಸ್ಟೀಲ್ ಸ್ಕ್ರ್ಯಾಪ್ ಮತ್ತು 2 ವಾಹನಗಳನ್ನು (ರೂ.40 ಸಾವಿರ ಬೆಲೆಯ) ಜಪ್ತಿ ಮಾಡಲಾಗಿದೆ.

ಅಬಕಾರಿ ಪೊಲೀಸ್ ವತಿಯಿಂದ 378.41 ಲೀಟರ್ (ರೂ.140698 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 93.60 ಲೀಟರ್ (ರೂ.44680 ಮೌಲ್ಯ) ಮದ್ಯ ವಶಪಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 32 ಪ್ರಕರಣ ದಾಖಲಿಸಲಾಗಿದೆ.

ಜಿಲ್ಲೆಯಾದ್ಯಂತ ಚುನಾವಣೆಯ ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಈಗಾಗಲೇ ವಿವಿಧ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಕಾರ್ಯಪ್ರವೃತ್ತವಾಗಿದೆ. 16 ಫ್ಲೈಯಿಂಗ್ ಸ್ಕ್ವ್ಯಾಡ್, 24 ಎಸ್‌ಎಸ್‌ಟಿ ತಂಡ ಮತ್ತು 7 ಅಬಕಾರಿ ತಂಡ ಕಾರ್ಯ ನಿರ್ವಹಿಸುತ್ತಿವೆ ಎಂದು ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com M: 9448633038

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

# ಸದುವಿನಯ ಸಚ್ಚಾರಿತ್ರ್ಯ ಸಂಪ್ರೀತಿ...

ಒಮ್ಮೆ ಗೌತಮಬುದ್ಧ ತಪಸ್ಸು ಮುಗಿಸಿಕೊಂಡು ತನಗಾದ ಸತ್ಯದ ದರ್ಶನವನ್ನು ಜನರಿಗೆ ತಿಳಿಸಲು ಹೊರಟಿದ್ದನು. ಆ ಸಮಯದಲ್ಲಿ ಆತನ ಅನುಯಾಯಿಯೊಬ್ಬ ಬುದ್ಧನಿಗೆ ಒಂದು ಪ್ರಶ್ನೆ ಕೇಳಿದ. "ಮನುಷ್ಯನ ಅಂತರಂಗದ ಜ್ಞಾನಕ್ಕೆ ಸರಿಸಮವಾದ ಸದ್ಗುಣಗಳಾವುವು?" ಎಂದು. ಆಗ ಬುದ್ಧನು ನೀಡಿದ ದೇಶಕಾಲತೀತವಾದ ತಿಳುವಳಿಕೆಯುಳ್ಳ ಉತ್ತರವೇನೆಂದರೆ "ಸದುವಿನಯದಿಂದ ವರ್ತಿಸುವುದು, ಸೌಜನ್ಯದಿಂದ ಬಾಳುವುದು, ಪ್ರೀತಿಯಿಂದ ಸ್ನೇಹ ಸಂಪಾದಿಸುವುದು, ಸಚ್ಚಾರಿತ್ರ್ಯದಿಂದ ಕೂಡಿರುವುದು, ಸಹಾಯದಿಂದ ಇತರರ ಮನ ಗೆಲ್ಲುವುದು ಹೀಗೆ ಇವೆಲ್ಲ ಪಡೆದ ವಿದ್ಯೆಗೆ ಸರಿಸಮವಾದ ಸದ್ಗುಣಗಳಾಗಿವೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ವ್ಯಕ್ತಿತ್ವ ವಿಕಾಸವಾಗುತ್ತದೆ. ಮೂರು ದಿನದ ಬದುಕು ಸುಂದರವಾಗುತ್ತದೆ" ಎಂದು ಬುದ್ಧ ಹೇಳಿದನು. ನೀರಿಂಗೆ ನೈದಿಲೆಯೇ ಶೃಂಗಾರ, ಗಗನಕ್ಕೆ ಚಂದ್ರಮನೇ ಶೃಂಗಾರ, ಸಮುದ್ರಕ್ಕೆ ತೆರೆಯೇ ಶೃಂಗಾರ ಹೇಗೋ ಒಬ್ಬ ಪರಿಪೂರ್ಣ ವ್ಯಕ್ತಿತ್ವಕ್ಕೆ ಕೈಗನ್ನಡಿಯೆಂದರೆ ಗೌರವಪೂರ್ಣವಾದ ಸದ್ಗುಣಗಳೆ.

ಪ್ರತಿಯೊಬ್ಬರ ಬದುಕಿನಲ್ಲಿ ಸದುವಿನಯ, ಸಂಪ್ರೀತಿ, ಸಚ್ಚಾರಿತ್ರ್ಯ, ಸೌಜನ್ಯದ ಗುಣಗಳಿದ್ದರೆ ಅವು ಸುಸಂಸ್ಕೃತದ ಪ್ರತೀಕಗಳಾಗಿರುತ್ತವೆ. ಸದ್ಗುಣಗಳನ್ನು ಮಾತುಗಳ ಮೂಲಕ, ಹಾವಭಾವಗಳ ಮೂಲಕ ಸ್ಪಂದನೆ–ಪ್ರತಿಕ್ರಿಯೆಗಳ ಮೂಲಕ ಅನಾವರಣಗೊಳಿಸಬಹುದು. ಇದರಲ್ಲಿ ನಾಟಕೀಯವಿರಬಾರದು. ಮನಸ್ಸು ಮತ್ತು ಮನೋಭಾವ ಗೆಲ್ಲುವಂತಿರಬೇಕು. ಹೃದಯವೈಶಾಲ್ಯತೆಯ ಸಂಪ್ರೀತಿ ವ್ಯಕ್ತವಾಗಿರಬೇಕು. ಸಹಾಯಕ್ಕಾಗಿ ಮನಸ್ಸು ಕಾತರದಿಂದ ಕೂಡಿರಬೇಕು. ಬಸವಣ್ಣನವರು ಈ ಕುರಿತು ತಮ್ಮ ವಚನವೊಂದರಲ್ಲಿ:

**ಮೃಧು ವಚನವೇ ಸಕಲ ತಪಂಗಳಯ್ಯ**
**ಮೃಧು ವಚನವೇ ಸಕಲ ಜಪಂಗಳಯ್ಯ**
**ಸದು ವಿನಯವೇ ಸದಾಶಿವನ ಒಲುಮೆಯಯ್ಯಾ**
**ಕೂಡಲಸಂಗಮದೇವಾ.**

ಎಂದಿದ್ದಾರೆ. ವಿದ್ಯೆಗೆ ವಿನಯವೇ ಭೂಷಣವೆಂಬಂತೆ. ಸದ್ವರ್ತನೆ, ಸಂಪ್ರೀತಿ, ಸಮರ್ಪಣಾಭಾವ ತೋರಿದರೆ ಎಂಥಹ ಪಾಪಿಗಳೂ ಸಹ ಪರಿವರ್ತನೆಯಾಗುತ್ತಾರೆ. ಅಂತಹ ಶಕ್ತಿ–ಯುಕ್ತಿಗಳು ಇದರಲ್ಲಿವೆ.

ಜೀವನ ಒಂದು ಪಯಣ. ಇಲ್ಲಿ ಯಾರೂ ಖಾಯಂ ಆಗಿ ಇರಲು ಸಾಧ್ಯವಿಲ್ಲ. ಇರುವಷ್ಟು ದಿನ ಅತ್ಯುತ್ತಮವಾದ ರೀತಿ–ನೀತಿಗಳಲ್ಲಿ ಬದುಕಬೇಕು. ನಾವು ನಮ್ಮ ವಿಸ್ತಾರವಾದ ಬದುಕಿನಲ್ಲಿ ಹೇಗೆ ಬದುಕಿದ್ದೇವೆ ಎನ್ನೋದಕ್ಕಿಂತ ಹೇಗೆ ಇತರರೊಂದಿಗೆ ಬಾಳುತ್ತಿದ್ದೇವೆ ಎಂಬುದು ಮುಖ್ಯ. ಅದರಲ್ಲೂ ಹಣ ಅಂತಸ್ತು ಗಳಿಸಿದಂತೆಯೇ ಜನರ ಪ್ರೀತಿ ವಿಶ್ವಾಸಗಳನ್ನು ಹೇಗೆ ಯಾವ ರೀತಿ ಸಂಪಾದಿಸಿದ್ದೇವೆ ಎಂಬುದೂ ಸಹ ಮುಖ್ಯ. ಜೀವನದಲ್ಲಿ ನಾವು ಏರಿದ ಎತ್ತರದ ಹಿಂದೆ ಎಷ್ಟೆಲ್ಲ ಜನರ ಸಹಾಯವಿರುತ್ತದೆ ಹಾಗೂ ಪರಿಸರವೂ ಕಾರಣವಾಗಿರುತ್ತದೆ. ಅವರೆಲ್ಲರನ್ನೂ ಸ್ಮರಿಸುವುದು ಸೌಜನ್ಯದ ಪ್ರತೀಕ. ನಮ್ಮಲ್ಲಿ ಎಷ್ಟೇ ಪ್ರತಿಭೆಯಿದ್ದರೂ ಸದುವಿನಯ, ಸಚ್ಚಾರಿತ್ರ್ಯದ ಸಮಷ್ಠಿ ಗುಣ ಬೆಳೆಸಿಕೊಳ್ಳದಿದ್ದರೆ ಹೇಗೆ? ಅವುಗಳು ನಮ್ಮ ಉಪಕಾರದ ಸ್ಮರಣೆಗೆ ಕಳಶವಿಟ್ಟಂತೆ.



ಡಾ. ರಾಜಶೇಖರ ಜಮದಂಡಿ, ಲೇಖಕರು ಮೊ: 9448441471

Scan For Digital Colourful
HAMPI TIMES E-paper

ಮೆದುಳ್ಗನ್ನಡಿ

ಆಧುನಿಕ ಜಗತ್ತಿನಲ್ಲಿ ಮಾನವ ಬಹಳ ಮುಂದುವರೆದಿದ್ದಾನೆ. ಜ್ಞಾನ ಸಂಪಾದನೆಯ ಶಾಖೆಗಳನ್ನು ಕಂಡುಹಿಡಿದಿದ್ದಾನೆ. ಅದರ ಸದುಪಯೋಗದ ಕಡೆಗೆ ನೋಡದೇ ದುರುಪಯೋಗದ ಕಡೆಗೆ ವಾಲಿದ್ದಾನೆ. ಉದಾಹರಣೆಗೆ: ಅಣುಬಾಂಬ್ ಕಂಡುಹಿಡಿದು ಮಾನವಕುಲದ ನಾಶದೊಂದಿಗೆ ಪ್ರಾಣಿಪಕ್ಷಿಸಂಕುಲದ ನಾಶ ಮತ್ತು ಪರಿಸರ ನಾಶಕ್ಕೆ ಕಾರಣನಾಗಿದ್ದಾನೆ. ಭಗವಂತ ಕೊಟ್ಟ ಬುದ್ಧಿಶಕ್ತಿಯನ್ನು ಅದನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ಮುಂದಿನ ಜನಾಂಗಕ್ಕೆ ಮಾದರಿಯಾಗಬೇಕೇ ಹೊರತು ವಿನಾಶಕಾರಿ ಗುಣಗಳಿಂದ ಏನೂ ಸಾಧಿಸಿದಂತಾಗುವುದಿಲ್ಲ. ಅಕ್ಕಮಹಾದೇವಿ ಹೇಳಿದಂತೆ:

**ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?**
**ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ?**
**ಹಸುವಿದ್ದು ಫಲವೇನು ಹಯವಿಲ್ಲದನ್ನಕ್ಕ?**

ಹೀಗೆ ಕೇವಲ ಬಹಿರಂಗದ ಸೌಂದರ್ಯ ಮತ್ತು ವಿನಾಶದ ಶಕ್ತಿಯಿಂದ ಸದ್ಗುಣಗಳನ್ನು ಮರೆಮಾಚುತ್ತಿದ್ದೇವೆ. ನಾವು ಹೆಚ್ಚು ಸದ್ಗುಣದ ಸಹನಶೀಲರಾದಂತೆಲ್ಲ ಬದುಕಿನ ವಾಸ್ತವತೆಯ ಅರಿವು ನಮಗಾಗುತ್ತದೆ. ಜೀವನದಲ್ಲಿ ಎಲ್ಲ ನಾವೆಂದುಕೊಂಡಂತೆಯೇ ನಡೆಯಬೇಕು ಎನ್ನುವ ಭ್ರಮೆಯಿಂದ ಒಂದಿಷ್ಟು ಹೊರಬರುತ್ತೇವೆ. ವಾಸ್ತವದ ಬದುಕಿನಲ್ಲಿ ಧೈರ್ಯದಿಂದ ಹೇಗೆ ಯಾವರೀತಿ ಎದುರಿಸಬೇಕೆಂಬ ಸಾಮರ್ಥ್ಯವನ್ನು ಸದ್ಗುಣಗಳು ತಂದುಕೊಡುತ್ತವೆ.

ಹಾಗಾಗಿ ನಾವು ಬದುಕಿನುದ್ದಕ್ಕೂ ಸದ್ಗುಣಗಳನ್ನು ರೂಢಿಸಿಕೊಂಡಾಗ ನಮ್ಮ ವ್ಯಕ್ತಿತ್ವದಲ್ಲಿ ಒಂದು ಬದಲಾವಣೆ ಕಾಣಬರುತ್ತದೆ. ಒಂದಲ್ಲ ಒಂದು ದಿನ ಸಮಾಜ ಇದನ್ನು ಗುರುತಿಸಿ ಸಂತೋಷ ವ್ಯಕ್ತಪಡಿಸುತ್ತದೆ. ಇದರಿಂದ ಸಮಾಜದ ಪರಿವರ್ತನೆಯ ಸಣ್ಣ ಕೆಲಸದಲ್ಲಿ ನಮ್ಮ ಪಾಲು ಸೇರಿಕೊಳ್ಳುತ್ತದೆ. ಆದ್ದರಿಂದ ನಾವು ನಮ್ಮ ಮಕ್ಕಳಿಗೆ ವಿದ್ಯೆಯ ಜೊತೆಗೆ ವಿನಯದ ಸದ್ಗುಣಗಳನ್ನು ಇಂದಿನಿಂದಲೇ ಹೇಳಿಕೊಡೋಣ, ಸರಿದಾರಿಗೆ ತರಲು ಶಕ್ತಿಮೀರಿ ಪ್ರಯತ್ನಿಸೋಣ.



# ಒಗ್ಗೂಡಿಸುತ್ತಿದ್ದ ಕಂದೀಲು ಒಂಟಿಯಾಯ್ತು

ರವಿ ಜಾರಿ ಶಶಿ ಮೂಡುವ, ಇಳಿ ಸಂಜೆಯ ಹೊತ್ತಿಗೆ ಮನೆಯನ್ನಾರಿಸಿದ ಮಬ್ಬುಗತ್ತಲನ್ನು ನೇಪಥ್ಯಕ್ಕೆ ಸರಿಸುವ ವಸ್ತುವೊಂದು ಇತ್ತು,ಅದೇ ಕಂದೀಲು ನಮಗೆ ಲಾಟೀನ್ ಎಂಬ ಹೆಸರಿನಿಂದ ಚಿರಪರಿಚಿತ, ವಿದ್ಯುತ್ನ ಮೇಲೆ ಬಲವಾದ ನಂಬಿಕೆ ಇಲ್ಲದ ಆ ದಿನಗಳಲ್ಲಿ ಅವಿರೋಧವಾಗಿ ಸುಮಾರು ವರ್ಷಗಳ ಕಾಲ ದರಬಾರು ಮಾಡಿದೆ.ಇಳಿಸಂಜೆಯಾದರೆ ಸಾಕು ಇದರ ಸಿದ್ದತೆ ಭರದಿಂದ ಸಾಗುತ್ತಿತ್ತು., ಸೀಮೆ ಎಣ್ಣೆ ಹಾಕುವುದು ಅದರ ಸುತ್ತಲೂ ಹೊದಿಕೆಯಾಗಿರುವ ಗ್ಲಾಸ್ ನ್ನು ಸ್ವಚ್ಚಗೊಳಿಸುವುದು, ಬತ್ತಿಯನ್ನು ಅದರೊಳಗೆ ನಿದಾನವಾಗಿ ಸೇರಿಸಿ ಲಾಟೀನ್ ಕೆಳಗಡೆಯ ಭಾಗದಲ್ಲೊಂದು ಬತ್ತಿ ಚಾಚುವ ತಿರುಗಣಿಯನ್ನು ನಾಲ್ಕು ಐದು ಬಾರಿ ತಿರಿಸಿ ಸರಿಯಾದ ಕೆಲಸ ಮಾಡುತ್ತದೋ ಇಲ್ಲವೋ ಎಂಬುದನ್ನು ಪರೀಕ್ಷಿಸಿ ಟ್ರಯಲ್ಗೆ ಒಂದು ಬಾರಿ ಕಿಡಿ ತಾಕಿಸಿ ನೋಡುತ್ತಿದ್ದರು,ಇದೊಂದು ನಿತ್ಯ ಕಾಯಕವಾಗಿತ್ತು. ಸಂಜೆ ಆರು ಗಂಟೆ ಆದರೆ ಸಾಕು, ಸಣ್ಣಗೆ ಹಚ್ಚಿಸಿ ಮನೆಯ ಪಡಸಾಲಿಯಲ್ಲಿ ಇದನ್ನ ನೇತು ಹಾಕಲೆಂದೆ ನಿರ್ಮಿಸಿದ ಹಗ್ಗಕ್ಕೆ ಕಟ್ಟುತ್ತಿದ್ದರು. ವಿದ್ಯುತ್ ಹೋದ ತಕ್ಷಣ ಅದರ ಕಿವಿಯನ್ನು ಹಿಂಡಿದರೆ ಸಾಕು ಬತ್ತಿ ಮುಂದಕ್ಕೆ ಚಾಚಿ ಬೆಳಕು ಪ್ರಕಾಶಮಾನವಾಗಿ ಹೊರ ಹೊಮ್ಮುತ್ತಿತ್ತು, ತಾನು ಹುರಿದು ಇತರರಿಗೆ ಬೆಳಕು ಕೊಡುವ ಗುಣ ಹೊಂದಿದ್ದ ಲಾಟೀನು,ತನ್ನತ್ತ ಹಲವರನ್ನು ಸೆಳೆದುಕೊಂಡು ಇದರ ಮುಂದೆ ಕುಳಿತು ಓದಿರುವ ಅನೇಕರ ಬದುಕಿನ ದಾರಿ ದೀಪವಾಗಿದೆ, ಕುರಿಗಾಹಿಗಳು ರಾತ್ರಿ ಕುರಿ ದೊಡ್ಡಿಗೆ ಹೋಗುವ ಸಮಯದಲ್ಲಿ ಹೆಗಲ ಮೇಲೆ ಕಂಬಳಿ, ಕೈಯಲ್ಲಿ ಲಾಟೀನ್ ಇರಲೇಬೇಕಿತ್ತು ರೈತ ನೀರನ್ನು ಹಾಯಿಸಲು ಹೊಲಕ್ಕೆ ತೆರಳುವಾಗ ಜೊತೆಯಾಗುತ್ತಿತ್ತು,ಅಲ್ಲಾವುದ್ದೀನ್ ದೀಪವೆಂಬ ಈ ಲಾಟೀನ್ ಇಂತವರಿಗೆಲ್ಲ ದಾರಿ ತೋರಿಸಿ ತನ್ನ ಶ್ರೇಷ್ಠತೆಯನ್ನು ಮೆರೆಯುತಿತ್ತು. ಹಳ್ಳಿಗಳ ಮನೆಗಳಲ್ಲಿ ಮದುವೆ ಸಾಗಿದರೆ ಚಪ್ಪರವೆಂಬ ಸುಂದರ ಮಂಟಪದ ಮದ್ಯಜಾಗವನ್ನು ಇದು ಅಕ್ರಮಿಸಿಕೊಂಡು ಬೆಳಕನ್ನು ನೀಡುತ್ತಿತ್ತು ಏಳು ದಿನಗಳ ಕಾಲ ಈ ಹಂದರದ ದೀಪ ಆರದಂತೆ ನೋಡಿಕೊಳ್ಳುತ್ತಿದ್ದರು ನಮ್ಮ ಹಿರಿಯರು.ನಮಗೆ ಬೇಕಾದ ಆಕಾರದಲ್ಲಿ ದೊರಕುತ್ತಿದ್ದ ಇವು, ಶ್ರೀಮಂತರ ಮನೆಗಳಲ್ಲಿ ಗಾಜಿನಿಂದ ಕೂಡಿದ ನೋಡಲೂ ಸುಂದರವಾದ ರೀತಿಯ ಅಲಂಕಾರಿಕ ವಸ್ತುವಂತಿದ್ದರು ಬಡವರ ಮನೆಗಳಲ್ಲಿ ಸಾಮಾನ್ಯ ದೀಪಗಳಿಂತಿದ್ದವು,ಆದರೆ ಬೆಳಕು ಮಾತ್ರ ಎಲ್ಲರಿಗೂ ಒಂದೆ ರೀತಿ ಇರುತ್ತಿದಿದ್ದು ಸಂತೋಷದ ವಿಷಯ,'ದೀಪದ ಬುಡದಲ್ಲಿ ಕತ್ತಲು ' ಎನ್ನುವ ಉದಾಹರಣೆಯನ್ನು ನಮ್ಮ ಶಾಲೆಯ ಮೇಷ್ಟ್ರು ಕೆಲವು ಸಂದರ್ಭಗಳಲ್ಲಿ ಕೊಡುತ್ತಿದ್ದರು, ದೂರದ ಊರುಗಳಿಗೆ ಬಂಡಿ ಮುಖೇನಾ ಸಾಗಬೇಕಾದರೆ ಬಂಡಿಯ ನೊಗಕ್ಕೆ ನೇತು ಹಾಕುತ್ತಿದ್ದು ಒಂದು ರೀತಿ ಇಂದಿನ ಕಾಲದ ವಾಹಗಳಿಗಿರುವ ಲೈಟ್ ನಂತೆ ಬಂಡಿಗೂ ಸಹ ಈ ರೂಪದಲ್ಲಿ ಇರುತ್ತಿತ್ತು."ಕುರುಡನ ಕೈಯಲ್ಲಿ ಲಾಟೀನ್ ಯಿದ್ದಂತೆ" ಎನ್ನುವ ದೋಷಾರೋಪಣೆಗೂ ಹೊಣೆಯಾಗಿದ್ದ.ಇಂತಹ ಅದ್ಬುತವಾದ ವಸ್ತು ಲಾಟೀನ್ ನಮ್ಮಿಂದ ದೂರ ಸರಿದು, ವಸ್ತು ಸಂಗ್ರಹಾಲಯವೆಂಬ ಹಣ ಪಡೆದು ತೋರಿಸುವ ಜಾಗದಲ್ಲಿ ಬೆಳಕು ಬೀರದೆ, ಒಡಲಲ್ಲಿ ಇತಿಹಾಸವನ್ನು ಅದಿಮಿಟ್ಟುಕೊಂಡು ನಗು ಮರೆತು ತುಕ್ಕುಹಿಡಿದು ಸವೆಯುತ್ತಾ ಕುಳಿತಿದೆ.ಚೀನಾದಿಂದ ಎರವಲು ಬಂದ ವಿಭಿನ್ನ ಲಾಟೀನ್ ಗಳು ಇವುಗಳ ಜಾಗವನ್ನು ಆಕ್ರಮಿಸಿದ ನಿಮಿತ್ತ ನಮ್ಮ ನೆನಪಿನ ಅಂಗಳದಿಂದ ದೇಶಿಯ ಕಂದೀಲುಗಳು ಇಲ್ಲಾದಂತಾಗಿದ್ದು ನೋವಿನ ಸಂಗತಿ,ಇದರ ಜೊತೆಗೆ ಎಲ್ ಇ ಡಿ ಬಲ್ಬಗಳನ್ನು ಹೊಂದಿರುವ ಬಗೆ ಬಗೆಯ ಟಾರ್ಚರಗಳು ಬಂದವು. ಚಾರ್ಜಬಲ್ ಟಾರ್ಚರ್ ಗಳು ರೈತನ ಕೈ ಹಿಡಿದು ರಾತ್ರಿ ದಾರಿ ತೋರಿಸಿದವು, ಜಂಗಮವಾಣಿಯಲ್ಲೂ ಟಾರ್ಚ್ ಇರುವುದರಿಂದ ಲಾಟೀನ್ ಎಂಬ ಬೆಳಕಿನ ಮನೆ ತೆರೆಮರೆಗೆ ಸದ್ದಿಲ್ಲದೆ ಸರಿಯಿತು,ಸೀಮೆ ಎಣ್ಣೆ ಇದರ ನೆನಪಲ್ಲೆ ಆತ್ಮಹತ್ಯೆ ಮಾಡಿಕೊಂಡಿತು. ಎಷ್ಟೊ ಮಕ್ಕಳು ಇದನ್ನು ನೋಡೆ ಇಲ್ಲ ಎಂದನಿಸುತ್ತದೆ.ಇತ್ತಿಚೀಗೆ ಜಾತ್ರೆಗಳಲ್ಲಿ ಕಂದೀಲುಗಳನ್ನೆ ಹೋಲುವಂತಹ ಸೌಲರ್ ಲ್ಯಾಂಪ್ಗಳ ಮಾರಾಟ ಸಾಗುತ್ತಿರುವ ಈ ಹೊತ್ತಿನಲ್ಲಿ ಮತ್ತೆ ನಮಗೆ ಆ ಲಾಟೀನ್ ಎನ್ನುವ ದೀಪದ ಕಡೆಗೆ ಮನಸ್ಸು ಓಡುತ್ತದೆ.



ಪ್ರದೀಪ ಎಂ.ಬಿ ಶಿಕ್ಷಕರು, ಹವ್ಯಾಸಿ ಬರಹಗಾರರು, ಕೂಡ್ಲಿಗಿ

Scan For Digital Colourful
HAMPI TIMES E-paper



# ಕೊಪ್ಪಳ ಅಕ್ಕಿ ಮಿಲ್ ಮಾಲೀಕರು ಪೋರ್ಟಲ್‌ನಲ್ಲಿ ನೋಂದಾಯಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಅಕ್ಕಿ ಮಿಲ್ ಮಾಲೀಕರು ಪೋರ್ಟಲ್‌ನಲ್ಲಿ ನೋಂದಾಯಿಸುವಂತೆ ಕೊಪ್ಪಳ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ. ರಾಜ್ಯದ ಎಲ್ಲಾ ಟ್ರೇಡರ್ಸ್, ಹೋಲ್‌ಸೇಲರ್ಸ್, ರಿಟೇಲರ್ಸ್, ಬಿಗ್ ಚೈನ್ ರಿಟೇಲರ್ಸ್, ಮಿಲ್ಲರ್ಸ್ ಗಳು ನೋಂದಾಯಿಸಿಕೊಂಡು ಅಕ್ಕಿ, ಭತ್ತದ ದಾಸ್ತಾನು ವಿವರವನ್ನು ಬ್ರೋಕನ್ ರೈಸ್ (ಅಕ್ಕಿನುಚ್ಚು), ಭಾಸುಮತಿ ಹೊರತುಪಡಿಸಿ ಅಕ್ಕಿ (ನಾನ್ ಭಾಸಮತಿ ವೈಟ್ ರೈಸ್), ಪರ್ಬೊಇಲ್ಡ್ ರೈಸ್ (ಕುಚಲಕ್ಕಿ), ಭಾಸುಮತಿ ರೈಸ್, ಪ್ಯಾಡಿ(ಭತ್ತ)ಗಳ ವಿವರಗಳನ್ನು ಪೋರ್ಟಲ್ https://evegoils.nic.in/login.html ನಲ್ಲಿ ಪ್ರತಿ ಶುಕ್ರವಾರ ಘೋಷಿಸುವಂತೆ ಆಹಾರ ಮಂತ್ರಾಲಯವು ಆದೇಶಿಸಿದ್ದು, ಕೊಪ್ಪಳ ಜಿಲ್ಲೆಯ ಎಲ್ಲಾ ಅಕ್ಕಿ ಮಿಲ್ ಗಳ ಮಾಲೀಕರು ತಪ್ಪದೇ ನಿಗದಿತ ದಿನದಂದು ನೈಜ ಪ್ರಮಾಣವನ್ನು ಪೋರ್ಟಲ್‌ನಲ್ಲಿ ಘೋಷಿಸುವಂತೆ ಪ್ರಕಟಣೆ ತಿಳಿಸಿದೆ.

# ಮಾ.22 ರಂದು ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್–2 ಮೇಲೆ ಇರುವ ಫೀಡರ್‌ಗಳ ಸಿ.ಟಿಗಳ ಬದಲಾಯಿಸುವ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಮಾ.22 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 04 ಗಂಟೆಯವರೆಗೆ ಎಫ್–34, ಎಫ್–36, ಎಫ್–40, ಎಫ್–75, ಎಫ್–76 ಮತ್ತು ಎಫ್–39ನ ಫೀಡರ್‌ಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ. ವಿನಾಯಕ ನಗರ, ಕಂಟೋನ್‌ಮೆಂಟ್, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜ್, ರೇಡಿಯೋ ಪಾರ್ಕ್, ಕೌಲ್‌ಬಜಾರ್ ಮುಖ್ಯ ರಸ್ತೆ, ಟೈಲರ್ ಬೀದಿ, ಕುವೆಂಪು ನಗರ, ಜಯನಗರ, ಚಂದ್ರ ಕಾಲೋನಿ, ರಾಮಾಂಜಿನೇಯ ನಗರ, ಸಿ.ಎಮ್.ಸಿ ಕಾಲೋನಿ, ಎಕ್ಸ್ ಸರ್ವಿಸ್‌ಮೆನ್ ಕಾಲೋನಿ, ಅರಣ್ಯ ಕ್ವಾಟರ್ಸ್, ಜಾಗೃತಿ ನಗರ, ಟ್ರಾಮಾ ಕೇರ್ ಸೆಂಟರ್, ಜಲ ಶುದ್ಧೀಕರಣ ಕೇಂದ್ರ ಮುಂತಾದ ಏರಿಯಾಗಳು.

# ಕಡಿಮೆ ಮತದಾನದ ಮತಗಟ್ಟೆಯಲ್ಲಿ ಮತದಾನ ಹೆಚ್ಚಿಸಲು ಕ್ರಮ ವಹಿಸಿ

■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ಯಾವುದೇ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಡಿಮೆ ಮತದಾನ ನಡೆದ ಮತಗಟ್ಟೆಗಳನ್ನು ಗುರುತಿಸಿ, ಅಂತಹ ಮತಗಟ್ಟೆಗಳಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ವಹಿಸಿ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಅವರು ಹೇಳಿದರು.

ಗುರುವಾರದಂದು ರಾಜ್ಯದ ಎಲ್ಲ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳೊಂದಿಗೆ ಸ್ವೀಪ್ ಚಟುವಟಿಕೆಗಳ ಕುರಿತು ಚರ್ಚಿಸಲು ಆಯೋಜಿಸಿದ್ದ ವಿಡಿಯೋ ಸಂವಾದವನ್ನು ಉದ್ದೇಶಿಸಿ ಅವರು ಮಾತನಾಡಿದರು. ಶೇಕಡವಾರು ಮತದಾನದ ಪ್ರಮಾಣವನ್ನು ಹೆಚ್ಚಿಸಲು ಅವಶ್ಯವಿರುವ ಸ್ವೀಪ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಹೊಸದಾಗಿ ಗುರುತಿಸಿದ ಮತಗಟ್ಟೆಗೆ ಭೇಟಿ ನೀಡಿ ಎಲ್ಲ ಸೌಕರ್ಯಗಳಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

**ಕವಿ ಮನಸು**

## ಅಲೆಮಾರಿಗಳು

ಊರೇ ಇಲ್ಲದ ಜನ ಇವರು
ಶಹರಗಳ ಮುಖ ನೋಡದವರು
ಧೂಳು ತುಂಬಿದ ರಸ್ತೆಗಳಲಿ
ಮುಖಕ್ಕೆ ಧೂಳು ಮೆತ್ತಿಕೊಂಡವರು
ತಗ್ಗು ದಿನ್ನಿ ಹತ್ತಿಳಿಯುತ ನಡೆಯುವರು
ಕೆಲಸ ಮಾಡದೇ ಇರುವವರು
ಸಿಕ್ಕಷ್ಟೇ ತಿಂದು ಬದುಕುವರು
ಪ್ರಖರವಾದ ಬಿಸಿಲಾದರೂ
ಕೊರೆವ ಚಳಿಯಾದರೂ
ಅತೀ ಮಳೆ ಸುರಿದರೂ
ಕೊಲ್ಮಿಂಚು ಗುಡುಗು ಸಿಡಿಲು
ಏನಾದರೂ ಚಿಂತೆ ಮಾಡದವರು
ಇವರಿಗೆ ಸೂರು ಗುಡಿಸಲು ಜೋಪಡಿ
ಸೂರು ಹೋದರೂ ಎದೆಗುಂದದವರು
ಬಂಗಾರದೊಡವೆ ಕಾಣದವರು
ಅಂದಿನ ದಿನ ಅಂದಿಗೆ ನಾಳಿನ ದಿನ
ನಾಳೆಗೆ
ಭವಿಷ್ಯದ ಚಿಂತೆ ಇವರಿಗಿಲ್ಲ
ಸಿಕ್ಕಷ್ಟು ತಿಂದು ಹಾಸಿಗೆ ಹಾಸಿ
ಮಕ್ಕಳ ಪಡೆಯುವರು
ಮಕ್ಕಳ ಬದುಕಿನ ಚಿಂತೆ ಇಲ್ಲದವರು
ಶಾಲೆ ಪಾಠ ಬೇಕಿಲ್ಲ
ಅಪ್ಪ ಅಮ್ಮ ಬದುಕಿದಂತೆ
ಮಕ್ಕಳು ಬದುಕುತ್ತಾರೆ
ಇವರ ಜೀವನವೇ ಇವರಿಗೆ ಸುಖ
ನೋಡಿದವರಿಗೆ ಇವರ ಬದುಕು
ನರಕದಂತೆ ಕಂಡರೂ ಅವರಿಗೆ
ಅವರ ಬದುಕೆ ಅದೇ ಬೃಂದಾವನ.

– **ಚಂದ್ರಶೇಖರಯ್ಯ** ರೋಣದಮಠ

## ಸ್ವರ್ಗದ ಕರೆನ್ಸಿ

ಎಷ್ಟು ಧನ ಕರದಲಿ
ಇದ್ದರೆ ತಾ ಉಳಿಯುವುದು
ಕಷ್ಟಪಟ್ಟು ದುಡಿದರೆ
ತಾನೇ ಉದರ ತುಂಬುವುದು

ಸಾಯುವತನಕ ಧನ ಕನಕ
ಬೇಕು ಎಂದೇಕೆ ಕೊರಗುವೆ
ಸಾಲ ಮಾಡಿ ಕೊನೆಯತನಕ
ಬಡ್ಡಿ ಕಟ್ಟಿ ಮಸಣ ಸೇರುವೆ

ಜೀವವಿರುವ ತನಕ ನಾನು ನನ್ನದು
ಎನ್ನುವ ಪಡಿಪಾಟಲುಗಳು
ಜೀವ ಬಿಟ್ಟು ಹೋಗುವಾಗ
ಎಲ್ಲ ಖಾಲಿ ಕರಗಳು

ಯಾವ ದೇಶಕೆ ಹೋದರೆ
ಆ ದೇಶದ ಕರೆನ್ಸಿಗಳ ಕೊಂಡಂತೆ
ನೀ ಮಾಡೋ ಪುಣ್ಯ ಕಾರ್ಯಗಳೇ
ಸ್ವರ್ಗದಲಿ ವಿನಿಮಯ ಕರೆನ್ಸಿಗಳಂತೆ

ಇರುವಾಗ ಮಾಡು ಉಪಕಾರಗಳು
ಮಾಡದಿರು ಯಾರಿಗೂ ಅಪಕಾರಗಳು
ಹೋದ ಮೇಲೆ ನಿನ್ನ ಹಿಂದೆ ಯಾರಿಲ್ಲ
ಪಾಪ ಪುಣ್ಯಗಳು ಬೆನ್ನ ಬಿಡೋದಿಲ್ಲ


– **ಕೆ ಎಂ ಬಸವರಾಜ**
ನಿವೃತ್ತ ಇಂಜನೀರ್ ಹೊಸಪೇಟೆ

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– **ಜಾಹೀರಾತು ವ್ಯವಸ್ಥಾಪಕರು.**

# ಲೋಕದ ಬೆಳಕನ್ನು ಹಂಬಲಿಸುವ ಕವಿತೆಗಳು




'ಬಟ್ಟೆಗಂಟಿದ ಬೆಂಕಿ' ವಿಶಾಲ್ ಮ್ಯಾಸರ್ ರವರ ಚೊಚ್ಚಲ ಕವನ ಸಂಕಲನ. ಬಟ್ಟೆ ಶಬ್ದಕ್ಕೆ 'ಹಾದಿ, ದಾರಿ' ಎಂಬ ಅರ್ಥವೂ ಇದೆ. ಇದನ್ನು ಸ್ವತಃ ಅವರೇ 'ಮೊದಲ ಮಾತು ಮತ್ತು ನೆನೆಕೆ' ಯಲ್ಲಿ ಪ್ರಸ್ತಾಪಿಸಿದ್ದಾರೆ ಕೂಡ.

'ಬಟ್ಟೆಗಂಟಿದ ಬೆಂಕಿ
ಆರುವುದು ಬೇಡ
ಹೊತ್ತಿ ಉರಿಯುವುದು ಬೇಡ
ನನ್ನ ಹಾದಿಗೆ ದೀಪವಾದರೆ ಅಷ್ಟೇ ಸಾಕು'

ನಮ್ಮ ನೆಲದ ಶೋಷಿತ ಸಮುದಾಯಗಳು ಚರಿತ್ರೆಯುದ್ದಕ್ಕೂ ಅನುಭವಿಸಿದ ನೋವು, ಅವಮಾನ, ಬಡತನ, ಅಂಧಶ್ರದ್ಧೆ?, ಮೊದಲಾದವುಗಳು ಅವರ ಬಾಳಬಟ್ಟೆಯನ್ನು ನಿರ್ಧರಿಸುವ ಸಂಗತಿಗಳಾಗಿರುವುದು ಈ ನೆಲದ ಕಹಿ ವಾಸ್ತವ. ಈ ಕಟು ವಾಸ್ತವವನ್ನೂ ಮೀರಿ ಈ ಸಮುದಾಯಗಳು 'ನೆಲದ ಮರೆಯ ನಿಧಾನ' ದಂತೆ ತಮ್ಮೊಡಲಲ್ಲಿ ಹುದುಗಿಸಿಕೊಂಡಿರುವ 'ತಾಯ್ತನ' ಸ್ವತಃ ಶೋಷಿತ ಸಮುದಾಯದಿಂದ ಬಂದ ವಿಶಾಲ್ ರವರಲ್ಲೂ ಜೀವದಾಯಿಯಂತೆ ಮಿಡಿಯುತ್ತಿದೆ. ಇದು ಇಲ್ಲಿನ ಕವಿತೆಗಳಲ್ಲಿ ಗುಪ್ತಗಾಮಿನಿಯಾಗಿ ಹರಿದಿದೆ.

ತನ್ನ ಸಮುದಾಯದ ಜನರ ನೋವಿಗೆ ಕಣ್ಣಾಗುವ ಕಿವಿಯಾಗುವ, ಹೃದಯದಾಳದಿಂದ ಮಿಡಿಯುವ ಕವಿ ಅದನ್ನು ವಿಶ್ವಾತ್ಮಕ ನೆಲೆಗೂ ವಿಸ್ತರಿಸುತ್ತಾರೆ. ಇದು ಇಲ್ಲಿನ ಬಹಳಷ್ಟು ಕವಿತೆಗಳ ಹಿಂದಿನ ಆಶಯವಾಗಿಯೂ ಕೆಲಸ ಮಾಡಿದೆ. ಇಲ್ಲಿನ ಪ್ರೇಮ ಕವಿತೆಗಳೂ ಇದಕ್ಕೆ ಹೊರತಾಗಿಲ್ಲ. ಕಾರಣ ಇಂದು ನಮ್ಮ ದೇಶದಲ್ಲಿ 'ಪ್ರೇಮ' ಎನ್ನುವುದು ಖಾಸಗಿ ವಿಚಾರವಾಗಿ ಉಳಿದಿಲ್ಲ. ಯಾರನ್ನು ಪ್ರೀತಿಸಬೇಕು, ಮದುವೆಯಾಗಬೇಕು, ಯಾರ ಜೊತೆ ಒಡನಾಡಬೇಕು? ಮೊದಲಾದವುಗಳನ್ನೆಲ್ಲಾ ನಿರ್ಧರಿಸುವವರು 'ಧರ್ಮದ ಗುತ್ತಿಗೆದಾರರೇ' ಆಗಿದ್ದಾರೆ. ಇದು ತಂದೊಡ್ಡಿದ–ಒಡ್ಡುತ್ತಿರುವ ಅಪಸವ್ಯಗಳನ್ನು 'ಕತ್ತರಿ, ಕನ್ನಡಿ, ಕೂದಲು' , 'ನೀನು' ಕವಿತೆಗಳು ತೆರೆದು ತೋರಿದರೆ, ಇವುಗಳನ್ನು ಮೀರಿ ನಿಲ್ಲುವ ಬಗೆಯನ್ನು 'ಕೀರು–ಶ್ಯಾವಿಗೆ' ಕವಿತೆ ಸ್ಪಷ್ಟಪಡಿಸುತ್ತದೆ.

ಚರಿತ್ರೆಯುದ್ದಕ್ಕೂ ಮಹಿಳೆ ಅನುಭವಿಸಿದ ನೋವು, ಅವಮಾನ, ತಲ್ಲಣಗಳನ್ನು 'ಅವಳು', 'ನಾನು ಹೆಣ್ಣು', 'ಕುಪ್ಪಸ, ಮೀಸೆ, ಆಯ್ಕೆ', 'ಅವ್ವ, ಮಗಳು, ಮಿಂಚುಹುಳು ಅಜ್ಜಿ'....ಮೊದಲಾದ ಕವಿತೆಗಳು ಕಟ್ಟಿಕೊಡುತ್ತವೆ. 'ಕುಪ್ಪಸ, ಮೀಸೆ, ಆಯ್ಕೆ' ಕವಿತೆಯಂತೂ ಇಡೀ ಪುರುಷ ಪ್ರಧಾನ ವ್ಯವಸ್ಥೆಗೆ ಸೆಡ್ಡು ಹೊಡೆಯುವಂತಿದ್ದರೆ, 'ಅವ್ವ, ಮಗಳು, ಮಿಂಚುಹುಳು ಅಜ್ಜಿ' ಕವಿತೆ ಒಂದು ವಿಷಾದದ ಎಳೆಯನ್ನೂ ಮೂಡಿಸುತ್ತದೆ.

ಇತಿಹಾಸದುದ್ದಕ್ಕೂ ತನ್ನ ಜನರು ಅನುಭವಿಸಿದ ದಾರುಣ ನೋವು, ಸಂಕಟ, ಅವಮಾನ, ಬಡತನಗಳನ್ನು 'ಕೂಗಿ ಹೇಳಿ', 'ಕಿಟಕಿಯ ಹೊರಗೆ ನೋಡಬೇಡ', 'ಗೋಡೆ', 'ನಾನು ಇದ್ದಿಲು', 'ಪ್ಲಾಸ್ಟಿಕ್ ಬಾಟಲಿಯ ನೀರು', 'ನಮ್ಮಪ್ಪ ಖರೇನ ಕವಿತೆ', 'ನನ್ನ ಜನ ಬತ್ತಾವ್ರೆ'.... ಮುಂತಾದ ಕವಿತೆಗಳು ತುಂಬಾ ಶಕ್ತವಾಗಿ ಕಟ್ಟಿಕೊಡುತ್ತವೆ. 'ನನ್ನವರು ಬತ್ತಾವ್ರೆ' ಕವಿತೆಯಂತೂ ಕವಿ ಸಿದ್ದಲಿಂಗಯ್ಯನವರನ್ನು ನೆನಪಿಸುತ್ತದೆ!

ಇಂದು ನಮ್ಮ ದೇಶದಲ್ಲಿ ಧರ್ಮ, ರಾಜಕೀಯ, ಯುದ್ಧ?, ಮೊದಲಾದವುಗಳು ತಂದೊಡ್ಡಿದ ದಾರುಣ ಸ್ಥಿತಿಯನ್ನು 'ಕಾಣೆಯಾಗಿದ್ದಾರೆ ಕಂಡರೆ ಹೇಳಿಬಿಡು', 'ಹಿಂದಿನ ನದಿಯ ನಾಡಲ್ಲಿ', 'ಹೊತ್ತಿನ ನದಿ', 'ಕನಸು ಕಾಣುವ ಹೊತ್ತಲ್ಲ', 'ಭಗತ್ ನೀನಿದ್ದರೆ ಬೇಸಿತ್ತು', 'ಹುಚ್ಚು ದೊರೆ', 'ಇತ್ತು ಎಂಬುದೆಲ್ಲ ಮತ್ತೊಮ್ಮೆ ಬಯಲು', 'ಬರೀ ರಾಜಕೀಯ', 'ಯುದ್ಧವೆಂದರೆ ಹೀಗೆ'... ಮೊದಲಾದ ಕವಿತೆಗಳು ಶಕ್ತವಾಗಿ ತೆಗೆದು ತೋರುತ್ತವೆ. ಈ ಎಲ್ಲವನ್ನೂ ಎದುರಿಸಿ ನಿಂತು ಒಂದು ದಿನ ಮಾನವತೆಯನ್ನು ಬೆಳೆದೇ ಬೆಳೆಯುತ್ತೇವೆ ಎಂಬ ಆಶಯವನ್ನು 'ನಾಟಿಸುತ್ತೇವೆ ನೇಗಿಲನ್ನು' ಕವಿತೆ ತುಂಬ ಗಾಢ ವಿಶ್ವಾಸದಲ್ಲಿ ಕಟ್ಟಿಕೊಡುತ್ತದೆ. 'ನಗುವನು ಬುದ್ಧ', 'ಚುಕ್ಕೆ ಚೂರಿ' ಕವಿತೆಗಳು ಬುದ್ಧನ ಕಾರುಣ್ಯ–ತಾಯ್ತನಗಳು ಈ ಲೋಕವನ್ನು ಕಾಯಬೇಕಾದ ಶಕ್ತಿಗಳು ಎಂಬ ವಾಸ್ತವ ಪ್ರಜ್ಞೆಯನ್ನು ಅಮಿತ ನಂಬಿಕೆಯಲ್ಲಿ ಮಂಡಿಸುತ್ತವೆ.

ಬಟ್ಟೆಗಂಟಿದ ಬೆಂಕಿ ಪುಸ್ತಕದ ಮೂಲಕ ವಿಶಾಲ್ ಭರವಸೆಯ ಕವಿಯಾಗಿ ಹೊರಹೊಮ್ಮಿದ್ದಾರೆ. ಈ ಸಂದರ್ಭದಲ್ಲಿ 'ಎಲ್ಲೋ ಕಳೆದುಹೋಗಬಹುದಾಗಿದ್ದ' ಈ ಯುವ ಕವಿಯನ್ನು ಸರಿಯಾದ ದಿಕ್ಕು– ದೆಸೆ ತೋರಿ ಮುನ್ನಡೆಸಿದ ಚಂದ್ರಶೇಖರ್. ಎಸ್. ಬಿ. ಯವರೂ ಸಹ ಅಭಿನಂದನಾರ್ಹರು. ಕವಿ ವಿಶಾಲ್ ಮುಂದೆ ಇನ್ನೂ ಹೆಚ್ಚಿನ ಸಾಧನೆಯ ಮೂಲಕ ಕನ್ನಡ ಕಾವ್ಯಲೋಕಕ್ಕೆ ತಮ್ಮ ಕೊಡುಗೆ ನೀಡಲಿ ಎಂದು ಹಾರೈಸುವೆ.



– **ವನಮಾಲ ಕಟ್ಟೆಗೌಡರ್**

# ಜಾನುವಾರುಗಳಿಗೆ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳಿ

## ಜಿಲ್ಲಾಧಿಕಾರಿ ನಲಿನ್ ಅತುಲ್ ಸೂಚನೆ



■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ಎಲ್ಲಾ ಜಾನುವಾರುಗಳಿಗೆ ಕಾಲುಬಾಯಿ ರೋಗ ಲಸಿಕೆ ಹಾಕಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಪಶು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ (ಎನ್.ಎ.ಡಿ.ಸಿ.ಪಿ) ಕಾರ್ಯಕ್ರಮದಡಿ 5ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಅಭಿಯಾನದ ಪೂರ್ವ ಸಿದ್ಧತೆಗಳ ಪರಿಶೀಲನೆಗಾಗಿ ಕೊಪ್ಪಳ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಜಿಲ್ಲಾ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿ 5ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮವು ಏಪ್ರಿಲ್ 1ರಿಂದ ಏ.30ರವರೆಗೆ ನಡೆಯಲಿದ್ದು ಎಲ್ಲಾ ಜಾನುವಾರುಗಳಿಗೆ ಲಸಿಕೆ ಸಿಗುವಂತಾಗಬೇಕು. ಲಸಿಕೆಯ ಬಳಿಕ ಜಾನುವಾರುಗಳ ಉಪಚಾರ ಬಗ್ಗೆಯೂ ರೈತರಿಗೆ ತಿಳುವಳಿಕೆ ನೀಡಿ ಎಂದು ಹೇಳಿದರು.

ಗ್ರಾಮದ ಗ್ರಾಮ ಪಂಚಾಯತಿಗೆ ಲಸಿಕೆಯ 2 ದಿನದ ಮುಂಚಿತವಾಗಿ ತಿಳಿಸಿ ಗ್ರಾಮ ಪಂಚಾಯತ್ ವತಿಯಿಂದ ಡಂಗುರ ಅಥವಾ ಟಾಂ ಟಾಂ ಮೂಲಕ ರೈತರಿಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು. ಆಯಾ ತಾಲ್ಲೂಕಿನ ವಿಸ್ತರಣಾ ಅಧಿಕಾರಿಗಳು ಎಂ.ಪಿ.ಸಿ.ಎಸ್, ರೈತ ಸಂಪರ್ಕ ಕೇಂದ್ರ ಸಂಘಗಳು ಹಾಗೂ ಪಶುಸಖಿಯರ ಮೂಲಕ ಕಾಲು ಬಾಯಿ ರೋಗ ಲಸಿಕಾ ಅಭಿಯಾನದ ಕುರಿತು ಜಾಗೃತಿ ಮೂಡಿಸಬೇಕು ಎಂದು ಡಿಸಿ ನಿರ್ದೇಶನ ನೀಡಿದರು. ಲಸಿಕಾ ಅಭಿಯಾನಕ್ಕೆ ಅಗತ್ಯ ಸಿದ್ಧತೆ: ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರಾದ ಡಾ. ಪಿ.ಎಂ.ಮಲ್ಲಯ್ಯ ಅವರು ಲಸಿಕಾ ಅಭಿಯಾನದ ಬಗ್ಗೆ ಮಾಹಿತಿ ನೀಡುತ್ತಾ, 5ನೇ ಸುತ್ತಿನ ಕಾಲು ಬಾಯಿ ರೋಗ ಏಪ್ರಿಲ್ 1ರಿಂದ ಒಂದು ತಿಂಗಳ ಕಾಲ ಹಮ್ಮಿಕೊಳ್ಳಲಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ ವಾಸ್ತವವಾಗಿ ಇರುವ ಒಟ್ಟು 2,72,467 ಲಕ್ಷ ಜಾನುವಾರುಗಳಿಗೆ ಲಸಿಕೆಯನ್ನು ಹಾಕುವ ಗುರಿ ಹೊಂದಲಾಗಿರುತ್ತದೆ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಲಸಿಕೆ ಮತ್ತು ಸಿರಿಂಜ್–ನೀಡಲ್‌ಗಳ ಶೇಖರಣೆ, ಲಸಿಕಾದಾರರ ವ್ಯವಸ್ಥೆ, ಲಸಿಕಾದಾರರಿಗೆ ಪ್ರವಾಸ ಭತ್ಯೆ ಮತ್ತು ಪ್ರೋತ್ಸಾಹ ಧನ, ಆನ್‌ಲೈನ್ ವರದಿ ನಿರ್ವಹಣೆ, ಮಾನಿಟರಿಂಗ್ ವ್ಯವಸ್ಥೆ, ಲಸಿಕಾ ಪ್ರತಿಕೂಲ ಪರಿಣಾಮ ಮತ್ತು ನಿರ್ವಹಣೆಗಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳಾದ ಡಿ.ಮಂಜುನಾಥ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಕೊಪ್ಪಳ ಘಟಕದ ಸಹಾಯಕ ನಿರ್ದೇಶಕರು ಹಾಗೂ ಪಾಲಿಕ್ಲಿನಿಕ್‌ನ ಮುಖ್ಯ ಪಶುವೈದ್ಯಾಧಿಕಾರಿ ಡಾ. ಯಮನಪ್ಪ ಬಿ.ಹೆಚ್. ಸೇರಿದಂತೆ ಪಶು ಇಲಾಖೆಯ ವಿವಿಧ ತಾಲ್ಲೂಕುಗಳ ಸಹಾಯಕ ನಿರ್ದೇಶಕರು, ಪಶು ವೈದ್ಯಾಧಿಕಾರಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ

## ಪ್ರತಿ ಕ್ವಿಂಟಾಲ್ ರಾಗಿಗೆ 3846 ರೂ । 1197 ರೈತರು ನೋಂದಣಿ

## ರೈತರ ನೋಂದಣಿ ಕ್ರಮಸಂಖ್ಯೆಗನುಗುಣವಾಗಿ ಖರೀದಿಗೆ ಕ್ರಮ

■ **ಹಂಪಿ ಟೈಮ್ಸ್ ಕೊಟ್ಟೂರು**



ಪಟ್ಟಣದ ಎಪಿಎಂಸಿ ಪ್ರಾಂಗಣದಲ್ಲಿ ಬುಧವಾರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಹಂಗಾಮಿನ ರಾಗಿ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎನ್.ಭರಮಣ್ಣ ರಾಗಿ ಖರೀದಿ ಪ್ರಕ್ರಿಯೆಗೆ ಚಾಲನೆ ನೀಡಿ, ಮುಂಗಾರು ಹಂಗಾಮಿ ರಾಗಿ ನೊಂದಾವಣಿ ಇನ್ನೂ ಚಾಲ್ತಿಯಲ್ಲಿದ್ದು,ನೊಂದಣಿ ಮಾಡಿಸದ ತಾಲೂಕಿನ ಅರ್ಹ ರೈತರು, ನೊಂದಾಣಿ ಕೇಂದ್ರಕ್ಕೆ ಆಗಮಿಸಿ ಸರ್ಕಾರದ ಬೆಂಬಲ ಬೆಲೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.



ಇದೇ ವೇಳೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ವೀರಣ್ಣ ಅವರು ತಮ್ಮ ಕೇಂದ್ರದಲ್ಲಿ 1197 ರೈತರು ನೊಂದಣಿ ಮಾಡಿಸಿದ್ದು,ಒಟ್ಟು 27826 ಕ್ವಿಂಟಾಲ್ ರಾಗಿಯನ್ನು ರೈತರಿಂದ ಖರೀದಿಸುವ ಬಗ್ಗೆ ಖರೀದಿ ಕೇಂದ್ರದ ಉದ್ಘಾಟನೆಗೆ ಆಗಮಿಸಿದ ತಹಶಿಲ್ದಾರ ಅಮರೇಶ್ ಜಿ.ಕೆ ಅವರಿಗೆ ಮಾಹಿತಿ ನೀಡಿದರು.

ಸರ್ಕಾರವು ಈ ಬಾರಿ ಎಫ್.ಎ.ಕ್ಯೂ ಗುಣಮಟ್ಟದ ಪ್ರತಿ ಕ್ವಿಂಟಾಲ್ ರಾಗಿಗೆ 3846 ರೂ.ಗಳನ್ನು ಘೋಷಿಸಿದೆ ಎಂದು ಎಪಿಎಂಸಿ ಅಧಿಕಾರಿಗಳು ತಹಶಿಲ್ದಾರರಿಗೆ ಮಾಹಿತಿ ನೀಡಿದರು.

ರಾಗಿ ನೊಂದಣಿ ಮಾಡಿಸಿದಂತ ರೈತರು ಕ್ರಮ ಸಂಖ್ಯೆಗೆ ಅನುಗುಣವಾಗಿ ನಿಗದಿ ಪಡಿಸಿದ ಆಯ ದಿನಾಂಕದಂದು 20/3/2024 ಬುಧವಾರ 1 ರಿಂದ 9 ಸಂಖ್ಯೆ ಉಳ್ಳವರು, ಮತ್ತು ದಿ: 21 ಗುರುವಾರ 10 ರಿಂದ 33 ಕ್ರಮ ಸಂಖ್ಯೆ ಉಳ್ಳವರು ,ದಿ:22 ಶುಕ್ರವಾರ 34 ರಿಂದ 60 ಸಂಖ್ಯೆಯವರು ಹಾಗೂ ದಿ: 23 ಶನಿವಾರ 61 ರಿಂದ 80 ಸಂಖ್ಯೆಯುಳ್ಳ ರೈತರು ತಮ್ಮ ರಾಗಿಯನ್ನು ಖರೀದಿ ಕೇಂದ್ರಕ್ಕೆ ತರಬೇಕು ಇದರಿಂದ ರೈತರು ಇಲ್ಲಿ ಕಾಯುವುದು ಹಾಗೂ ಖರೀದಿಸಿದನ್ನು ಸರಬರಾಜು ಮಾಡಲು ಅನುಕೂಲವಾಗುತ್ತೆ ಎಂದು ತಿಳಿಸಿದರು ಈ ವೇಳೆ ಆಹಾರ ಇಲಾಖೆ ಡಿಡಿ ಮಲ್ಲಿಕಾರ್ಜುನ,ಆಹಾರ ಸರಬರಾಜು ವ್ಯವಸ್ಥಾಪಕರು ಈಶ್ವರಪ್ಪ,ಖರೀದಿ ಕೇಂದ್ರದ ನೊಂದಣಿ ಅಧಿಕಾರಿ ಸೇರಿದಂತೆ, ಅನೇಕ ರೈತರು ಹಾಜರಿದ್ದರು.

> ಸರ್ಕಾರದ ಬೆಂಬಲ ಬೆಲೆ ರಾಗಿ ಮಾರಾಟದಲ್ಲಿ ರೈತರಿಗೆ ಸಿಗುವ ಲಾಭಕ್ಕಿಂತ, ಮದ್ಯವರ್ತಿಗಳ ಮಾರಾಟದಾರರಿಗೆ ಹೆಚ್ಚಿನ ಲಾಭ ದೊರಿಯುತ್ತಿವೆ ಎಂಬ ವಿಷಯ ಚರ್ಚೆ ನಡೆತಿದ್ದು,ಮದ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಲು ಖರೀದಿ ಕೇಂದ್ರದ ಅಧಿಕಾರಿಗಳು ಹೆಚ್ಚಿನ ಜಾಗೃತಿ ವಹಿಸಬೇಕು. ಬಹಿರಂಗಗೊಂಡರೆ ಹೋರಾಟಕ್ಕೆ ಇಳಿಬೇಕಾಗುತ್ತೆ.
>
> – **ಎನ್.ಭರಮಣ್ಣ,** ರೈತ ಸಂಘದ ರಾಜ್ಯ ಉಪಾಧ್ಯಕ್ಷ. ಕೊಟ್ಟೂರು.

# ಶಸ್ತ್ರಾಸ್ತ್ರಗಳು ಪೊಲೀಸ್ ಠಾಣೆಗೆ ಒಪ್ಪಿಸಲು: ಡಿಸಿ

■ **ಹಂಪಿ ಠಯಮ್ಸ್ ಬಳ್ಳಾರಿ**



ಲೋಕಸಭೆ ಸಾರ್ವತ್ರಿಕ ಚುನಾವಣೆ–2024ರ ಅಂಗವಾಗಿ ಮಾದರಿ ನೀತಿ ಸಂಹಿತೆಯು ಜಾರಿಯಲ್ಲಿದ್ದು, ಆಯುಧ ಕಾಯ್ದೆ 1959 ಕಲಂ (4), ಕಲಂ (21) ಮತ್ತು ಕಲಂ 24–ಎ(1) ರಡಿ ಆಯುಧ ಲೈಸೆನ್ಸ್ ಹೊಂದಿದ ಎಲ್ಲಾ ಲೈಸನ್ಸ್‌ದಾರರು ರಾಷ್ಟ್ರೀಕೃತ ಬ್ಯಾಂಕ್‌ಗಳು, ರಿಸರ್ವ್ ಬ್ಯಾಂಕ್ ಅವರಿಂದ ಅನುಮೋದಿಸಿದ ಶೆಡ್ಯೂಲ್ ಬ್ಯಾಂಕ್‌ಗಳ ಸೆಕ್ಯೂರಿಟಿ ಗಾರ್ಡ್‌ಗಳ ಆಯುಧಗಳನ್ನು ಹೊರತುಪಡಿಸಿ.

ಚುನಾವಣೆಯನ್ನು ಶಾಂತಿಯುತವಾಗಿ ನಡೆಸಲು ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಚುನಾವಣೆ ಮುಕ್ತಾಯಗೊಳ್ಳುವವರೆಗೆ ಪರವಾನಿಗೆದಾರರು ತಮ್ಮ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಜೂ.13 ರವರೆಗೆ ಠೇವಣಿ ಮಾಡುವಂತೆ ಸಿ.ಆರ್.ಪಿ.ಸಿ ಕಾಯ್ದೆ 1973 ಕಲಂ 144 ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಯಾವುದೇ ಲೈಸೆನ್ಸ್‌ದಾರರು ಚುನಾವಣೆ ಸ್ಥಳ ಮತ್ತು ಸಾರ್ವಜನಿಕ ಸ್ಥಳದಲ್ಲಿ ಆಯುಧಗಳನ್ನು ಹೊತ್ತೊಯ್ಯುವುದು ಮತ್ತು ಪ್ರದರ್ಶನ ಮಾಡುವುದನ್ನು ನಿಷೇಧಿಸಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.




## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಶೋಭಾಕೃತ

**22–03–2024 – ಶುಕ್ರವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಘಾ |
| ಯೋಗ | : ಧೃತಿ |
| ಕರಣ | : ಕೌಳವ |
| ಸೂರ್ಯೋದಯ | : 06:29:56 |
| ಸೂರ್ಯಾಸ್ತ | : 18:37:38 |
| ರಾಹು | : 11:03–12:34 |
| ಯಮಘಂಡ | : 15:36–17:07 |
| ಗುಳಿಕ | : 08:01–09:32 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 21–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1582.20 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 765 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.630 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1593.51 ಅಡಿ |
| ಒಳ ಹರಿವು | 533 ಕ್ಯುಸೆಕ್ |
| ಹೊರ ಹರಿವು | 8252 ಕ್ಯುಸೆಕ್ |
| ಸಾಮರ್ಥ್ಯ | 14.213 ಟಿಎಂಸಿ |

# ಜಿಲ್ಲೆಯ 24 ಚೆಕ್‌ಪೋಸ್ಟ್ ಭದ್ರತೆ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರ। ಲೋಕಸಭೆ ಸಾರ್ವತ್ರಿಕ ಚುನಾವಣೆ




■ **ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆಯ ಹಿನ್ನಲೆಯಲ್ಲಿ ಚುನಾವಣೆಯ ಮಾದರಿ ನೀತಿ ಸಂಹಿತೆ ಕಟ್ಟುನಿಟ್ಟಿನ ಜಾರಿಗೆ ಜಿಲ್ಲೆಯ 5 ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಒಟ್ಟು 24 ಚೆಕ್‌ಪೋಸ್ಟ್ ಸ್ಥಾಪಿಸಿ, ನೇರ ದೃಶ್ಯಾವಳಿ ಸೆರೆಹಿಡಿಯಲಾಗುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಮತದಾರರಿಗೆ ಆಮಿಷ ಒಡ್ಡಲು ಮತ್ತು ಅನಧಿಕೃತವಾಗಿ ವಸ್ತುಗಳನ್ನು ನೀಡುವುದು. ದಾಖಲೆಯಿಲ್ಲದ ಹಣವನ್ನು ಸಾಗಾಣೆ ಮಾಡುವುದು ಸೇರಿದಂತೆ ಆಕ್ರಮ ಚಟುವಟಿಕೆಗಳಿಗೆ ಆಸ್ಪದ ನೀಡದೇ ಮುಕ್ತ, ನ್ಯಾಯ ಸಮ್ಮತ ಮತ್ತು ಪಾರದರ್ಶಕ ಚುನಾವಣೆ ನಡೆಸಲು ಹದ್ದಿನ ಕಣ್ಣಿಡಲಾಗಿದೆ. ಇದರ ಭಾಗವಾಗಿ ಬಳ್ಳಾರಿ ಜಿಲ್ಲೆ ಅಂತರ್‌ರಾಜ್ಯ ಗಡಿ ಮತ್ತು ಅಂತರ್‌ಜಿಲ್ಲಾ ಗಡಿಯನ್ನು ಹೊಂದಿದೆ. ಈ ಹಿನ್ನಲೆಯಲ್ಲಿ ಜಿಲ್ಲಾಡಳಿತ ತೀವ್ರ ಬಿಗಿಯಾದ ಕ್ರಮವನ್ನು ಕೈಗೊಂಡಿದೆ ಅಲ್ಲದೇ, ಎಚ್ಚರಿಕೆಯನ್ನು ವಹಿಸಲಾಗಿದೆ.

ಚುನಾವಣೆ ಅಕ್ರಮಗಳ ಮೇಲೆ ಕಣ್ಗಾವಲು ಇಡಲು ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ, ಅಲ್ಲಿ ವಿವಿಧ ತಂಡಗಳನ್ನು ನೇಮಿಸಲಾಗಿದೆ. ಇಲ್ಲಿನ ಕಾರ್ಯಚಟುವಟಿಕೆಗಳ ನೇರ ದೃಶ್ಯಾವಳಿಗಳನ್ನು ಸೆರೆಹಿಡಿಯಲು ಸಿಸಿ ಕ್ಯಾಮೆರಾ ಅಳವಡಿಸಿ ಜಿಲ್ಲಾ ನಿಯಂತ್ರಣ ಕೊಠಡಿಯಲ್ಲಿ ವೀಕ್ಷಣೆ ಮಾಡುವುದು ಆಪ್ ಮೂಲಕವೂ ಜಿಲ್ಲಾ ಚುನಾವಣಾಧಿಕಾರಿಗಳು, ಜಿಲ್ಲಾ ರಕ್ಷಣಾಧಿಕಾರಿಗಳು, ಎಂಸಿಸಿ ತಂಡದ ಮುಖ್ಯಸ್ಥರು ವೀಕ್ಷಣೆ ಮಾಡಲಿದ್ದಾರೆ.

ಜಿಲ್ಲೆಯಲ್ಲಿ 7, ಅಂತರ್‌ಜಿಲ್ಲೆ ಗಡಿಯಲ್ಲಿ 4 ಮತ್ತು ಅಂತರರಾಜ್ಯ ಆಂಧ್ರಪ್ರದೇಶ ಗಡಿಭಾಗದಲ್ಲಿ 13 ಸೇರಿ 24 ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

**5 ಕ್ಷೇತ್ರದಲ್ಲಿ 24 ಚೆಕ್‌ಪೋಸ್ಟ್ ಸ್ಥಾಪನೆ:**

ಜಿಲ್ಲೆಯಾದ್ಯಂತ ಒಟ್ಟು 24 ಚೆಕ್‌ಪೋಸ್ಟ್ ಸ್ಥಾಪಿಸಲಾಗಿದ್ದು, ಪ್ರತಿ ಚೆಕ್‌ಪೋಸ್ಟ್‌ನಲ್ಲಿ 3 ಎಸ್‌ಎಸ್‌ಟಿ ಅಧಿಕಾರಿಗಳು ಹಾಗೂ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ. ಪ್ರತಿ ಮತಕ್ಷೇತ್ರಕ್ಕೆ ಫ್ಲೈಯಿಂಗ್ ಸ್ಕ್ವಾಡ್ ಮತ್ತು ವಿಡಿಯೋ ಕಣ್ಗಾವಲು ತಂಡಗಳನ್ನು ನೇಮಕ ಮಾಡಲಾಗಿದೆ.

**ಕ್ಷೇತ್ರವಾರು ಚೆಕ್‌ಪೋಸ್ಟ್ ಸ್ಥಾಪನೆ:**

**91–ಕಂಪ್ಲಿ:**

ಕಂಪ್ಲಿ ಕ್ಷೇತ್ರದಲ್ಲಿ 3 ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಸಿಂಧಗೇರಿ, ಅಂತರ್‌ಜಿಲ್ಲೆ ಕೊಪ್ಪಳ ಗಡಿಭಾಗದಲ್ಲಿ ಕಂಪ್ಲಿ ಸೇತುವೆ ಬಳಿ ಮತ್ತು ವಿಜಯನಗರ ಜಿಲ್ಲೆ ಗಡಿಭಾಗದ ದೇವಲಾಪುರ – ಉಪ್ಪಾರಹಳ್ಳಿ ವೃತ್ತದಲ್ಲಿ ಸ್ಥಾಪನೆ ಮಾಡಲಾಗಿದೆ.

**92–ಸಿರುಗುಪ್ಪ:**

ಸಿರುಗುಪ್ಪ ಕ್ಷೇತ್ರದಲ್ಲಿ 5 ಚೆಕ್‌ಪೋಸ್ಟ್‌ಗಳನ್ನು ಆರಂಭಿಸಲಾಗಿದ್ದು, ಅಂತರ್‌ಜಿಲ್ಲೆ ರಾಯಚೂರು ಗಡಿಭಾಗದ ಇಬ್ರಾಹಿಂಪುರ–ಇಬ್ರಾಹಿಂಪುರ ಗ್ರಾಮ, ಅಂತರ್‌ರಾಜ್ಯ ಗಡಿಭಾಗದ ಇಟ್ಟಿಗೆಹಾಳ್, ವಟ್ಟುಮುರುವಾಣಿ, ಮಾಟಸೂಗೂರು ಮತ್ತು ಕೆ.ಬೆಳಗಲ್ ಗ್ರಾಮಗಳಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಲಾಗಿದೆ.

**93–ಬಳ್ಳಾರಿ ಗ್ರಾಮೀಣ ಕ್ಷೇತ್ರ:**

ಬಳ್ಳಾರಿ ಗ್ರಾಮೀಣ ವ್ಯಾಪ್ತಿಯಲ್ಲಿ ಅಂತರ್‌ರಾಜ್ಯ ಆಂಧ್ರಪ್ರದೇಶ ಗಡಿಭಾಗದ ಹಲಕುಂದಿ(ಬೆಂಗಳೂರು ರಸ್ತೆ), ಎತ್ತಿನ ಬೂದಿಹಾಳ್(ಬೊಮ್ಮನಹಾಳ್ ರಸ್ತೆ), ರೂಪನಗುಡಿ ರಸ್ತೆ, ಜೋಳದರಾಶಿ ಗ್ರಾಮ(ಗುಂತಕಲ್ ರಸ್ತೆ), ಕಾರೇಕಲ್ಲು ಗ್ರಾಮ, ಸಿಂಧವಾಳ ಗ್ರಾಮ ಮತ್ತು ಆಂಧ್ರ ಗಡಿಭಾಗದ ಬೊಮ್ಮನಹಾಳ್ ಗ್ರಾಮ ಒಳಗೊಂಡಂತೆ 7 ಕಡೆ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ.

**94–ಬಳ್ಳಾರಿ ನಗರ ಕ್ಷೇತ್ರ:**

ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಕಣೆಕಲ್ ರಸ್ತೆಯ ಆಂಧ್ರಾಳ್ ಬೈಪಾಸ್ ಹತ್ತಿರ, ಮೋಕಾ ರಸ್ತೆಯ ಕೆಇಬಿ ವೃತ್ತ ಹತ್ತಿರ, ತಾಳೂರು ರಸ್ತೆಯ ಮಹಾನಂದಿ ಕೊಟ್ಟಂ ಹತ್ತಿರ, ರೂಪನಗುಡಿ ರಸ್ತೆಯ ದುರ್ಗ ವೃತ್ತದ ಹತ್ತಿರ, ಸಿರುಗುಪ್ಪ ರಸ್ತೆಯ ಕ್ಲಾಸಿಕ್ ಫಂಕ್ಷನ್ ಹಾಲ್ ಹತ್ತಿರ, ಅನಂತಪುರ ರಸ್ತೆಯ ಬೈಪಾಸ್ ವೃತ್ತದ ಹತ್ತಿರ ಸೇರಿ 5 ಸ್ಥಾಪಿಸಲಾಗಿದೆ.

**95–ಸಂಡೂರು ಕ್ಷೇತ್ರ:**

ಸಂಡೂರು ಕ್ಷೇತ್ರ ವ್ಯಾಪ್ತಿಯಲ್ಲಿ ಜಿಂದಾಲ್‌ನ ವಿದ್ಯಾನಗರ ವಿಮಾನ ನಿಲ್ದಾಣ ಹತ್ತಿರ, ಅಂತರ್‌ಜಿಲ್ಲೆಯಾದ ಚಿತ್ರದುರ್ಗ ಗಡಿಭಾಗದ ಮೊಟಲಕುಂಟ ಹತ್ತಿರ ಮತ್ತು ಅಂತರ್‌ರಾಜ್ಯ ಆಂಧ್ರಪ್ರದೇಶ ಗಡಿಭಾಗದ ಜಿ.ಬಸಾಪುರ ಮತ್ತು ಎಂ.ಗಂಗಲಾಪುರ ಗ್ರಾಮಗಳಲ್ಲಿ 4 ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

# ಮುಜುಗರ ತಂದ ಮೂತ್ರಾಲಯ ಅಧಿಕಾರಿಗಳ ವಿರುದ್ಧ ಆಕ್ರೋಶ



■ **ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಸರ್ಕಾರಿ ಬಸ್ ನಿಲ್ದಾಣದ ಶೌಚಾಲಯದಲ್ಲಿ ಪುರುಷರು ಮುಜುಗರದಿಂದ ಮೂತ್ರ ವಿಸರ್ಜನೆ ಮಾಡುತ್ತ,ಸಂಬಂಧ ಪಟ್ಟ ಅಧಿಕಾರಿಗಳಿಗೆ ಇಡೀ ಶಾಪ ಹಾಕುವ ದೃಶ್ಯ ನಿತ್ಯ ಇಲ್ಲಿ ಸರ್ವೇಸಾಮಾನ್ಯವಾಗಿದೆ.

ಮೂತ್ರ ವಿಸರ್ಜನೆ ಮಾಡುವಲ್ಲಿ, ತಡೆಗೋಡೆಗಳು ಹಾಳಾಗಿ ಬಹುದಿನಗಳೇ ಕಳೆದಿವೆ,ಆದರೆ ಸಂಬಂಧ ಪಟ್ಟ ಅಧಿಕಾರಿಗಳು ಇಲ್ಲಿಯೇ ತಮ್ಮ ಜಲ ಬಾದೆ ತೀರಿಸಿಕೊಂಡು ಈ ಬಗ್ಗೆ ಗಮನ ಹರಿಸದೆ

ನಿರ್ಲಕ್ಷ್ಯ ವಹಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ತಡೆಗೋಡೆಗಳು ಹಾಳಾಗಿರುವ ಹಿನ್ನೆಲೆ ಮೂತ್ರ ವಿಸರ್ಜನೆ ಮಾಡುವಾಗ ಪಕ್ಕದಲ್ಲಿ ಮೂತ್ರ ವಿಸರ್ಜನೆ ಮಾಡುವಂತವರ ಮೂತ್ರಗಳು ಸಿಡಿಯುತ್ತವೆ ಎಂಬ ಕಾರಣಕ್ಕೆ ಹಾಗೂ ಮುಜುಗರದಿಂದ ಕೆಲವರು ಬಹು ಸಮಯದವರೆಗೆ ಕಾದು ಪಕ್ಕದಲ್ಲಿ ಯಾರು ಇಲ್ಲದಿದ್ದ ವೇಳೆ ಮಾತ್ರ ವಿಸರ್ಜನೆ ಮಾಡುವ ದುಸ್ಥಿತಿ ನಿರ್ಮಾಣವಾಗಿದೆ.

ಅಲ್ಲದೆ, ಪ್ರಯಾಣದ ವೇಳೆ ಅವಸರದಲ್ಲಿ ಪ್ರಯಾಣಿಕರು ಶೌಚಾಲಯಕ್ಕೆ ತೆರಳಿ ಮೂತ್ರ ವಿಸರ್ಜನೆಗೆ ಮುಂದಾದರೆ,ಮೂತ್ರ ಪಕ್ಕದವರಿಗೆ ಸಿಡಿದವು ಎಂಬ ಭಯದಿಂದ ಮೈ ಬಿಗಿ ಇಡಿದು ವಿಸರ್ಜನೆಗೆ ಮುಂದಾಗುವರು, ಈ ಸಂಬಂಧ ಕೆಲವರು ಏರುಪೇರಾದುದ್ದು ಇಲ್ಲಿ ಉಂಟು, ಇದೇ ಸಿಟ್ಟಿನಲ್ಲಿ ಪ್ರಯಾಣಿಕರು ಅಧಿಕಾರಿಗಳಿಗೆ ಸ್ಥಳದಲ್ಲಿಯೇ ವಾಚಾ ಮಾಚವಾಗಿ ಚಾಡಿಸಿದ್ದು ನಿದರ್ಶನ ಇದೆ.

ಶೀಘ್ರ ಸಂಬಂಧ ಪಟ್ಟ ಅಧಿಕಾರಿಗಳು ಈ ಬಗ್ಗೆ ಎಚ್ಚೆತ್ತು ಕೊಟ್ಟೂರು ಸರ್ಕಾರಿ ಬಸ್ ನಿಲ್ದಾಣದಲ್ಲಿ ಹಾಳಾಗಿರುವ ತಡೆ ಗೋಡೆಗಳನ್ನು ನಿರ್ಮಿಸಬೇಕು ಇಲ್ಲವಾದರೆಮುಂದೆನಡೆಯುವಘಟನೆಗಳಿಗೆತಾವುಹೊಣೆಗಾರರಾಗಬೇಕಾಗುತ್ತೆ ಎಂದು ಸಾರ್ವಜನಿಕರು ಆಗ್ರಹಿಸಿದರು.

> ಕೊಟ್ಟೂರು ತಾಲೂಕು ಕೇಂದ್ರ ಮತ್ತು ಧಾರ್ಮಿಕ ಹಾಗೂ ಶೈಕ್ಷಣಿಕ ಕೇಂದ್ರ ಇಲ್ಲಿನ ಬಸ್ ನಿಲ್ದಾಣಕ್ಕೆ ಸಾವಿರಾರು ಸಂಖ್ಯೆಯಲ್ಲಿ ನಿತ್ಯ ಪ್ರಯಾಣಿಕರು ಆಗಮಿಸುವರು.ಇಲ್ಲಿನ ಶೌಚಾಲಯವನ್ನು ಸುವ್ಯವಸ್ಥಿತವಾಗಿ ಕಾಪಾಡಿಕೊಳ್ಳಲು ಆಗದಿರುವುದು ನಾಚಿಕೆ ಗೇಡು.ಶೀಘ್ರ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು.
>
> – **ರಾಜಶೇಖರ,** ಪ್ರಜ್ಞಾವಂತ ನಾಗರಿಕರು,ಕೊಟ್ಟೂರು

## ಶ್ರೀ ರೇಣುಕಾಚಾರ್ಯ ಜಯಂತಿ ಮಾ.23 ಕ್ಕೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿಯನ್ನು ಲೋಕಸಭೆ ಚುನಾವಣೆ–2024ರ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸರಳ ಹಾಗೂ ಸಾಂಕೇತಿಕವಾಗಿ ಮಾ.23 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಅವರು ತಿಳಿಸಿದ್ದಾರೆ.

14 ಭಾಷೆ ಈಗ ನಿಮ್ಮ ಮಾತೃ ಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ..ವಿ.ಜಿ.

# ಹೆಚ್ಚಿನ ಬೆಲೆಯಲ್ಲಿ ರಾಗಿ ಜೋಳ ಖರೀದಿ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಖಾಸಗಿ ವರ್ತಕರು ಮಾರುವ ಮಾರುಕಟ್ಟೆ ಧರಕ್ಕಿಂತ ಸರ್ಕಾರ ತೆರೆದಿರುವ ರಾಗಿ ಖರೀದಿ ಕೇಂದ್ರದಲ್ಲಿ ಹೆಚ್ಚಿನ ಧರ ನಿಗದಿಪಡಿಸಿದ್ದು ತಾಲೂಕಿನ ರೈತರು ಸದುಪಯೋಗಪಡಿಸಿಕೊಳ್ಳಿ ಎಂದು ತಹಸೀಲ್ದಾರ್ ರಾಜು ಪಿರಂಗಿ ತಿಳಿಸಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಲ್ಲಿ ರಾಗಿ ಬೆಂಬಲ ಬೆಲೆ ಖರೀದಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಬರಗಾಲದಿಂದ ತತ್ತರಿಸಿರುವ ರೈತರು ತಮ್ಮ ಬೆಳೆಗಳಿಗೆ ಬೆಲೆ ಇಲ್ಲದೆ ಸಂಕಷ್ಟಕ್ಕೆ ಒಳಗಾಗಬಾರದು ಎಂಬ ಉದ್ದೇಶದಿಂದ ರೈತರಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ 23–24 ನೇ ಸಾಲಿನ ರಾಗಿ ಖರೀದಿ ಕೇಂದ್ರವನ್ನು ತೆರೆಯಲಾಗಿದೆ.ಪ್ರಸಕ್ತ ಸಾಲಿನಲ್ಲಿ ಖರೀದಿ ಕೇಂದ್ರದಲ್ಲಿ 494 ರೈತರು ನೋಂದಾವಣೆ ಮಾಡಿಸಿದ್ದಾರೆ. ಅದರಲ್ಲಿ 12,973 ಕ್ವಿಂಟಾಲ್ ರಾಗಿ ಮತ್ತು 259 ಕ್ವಿಂಟಾಲ್ ಜೋಳದ ಖರೀದಿಗೆ ರೈತರಿಂದ ನೋಂದಣಿ ಆಗಿದೆ ಎಂದರು. ಎಫ್ ಎ.ಕ್ಯೂ ಗುಣಮಟ್ಟ ಆಧಾರದ ಮೇಲೆ ಪ್ರತಿ ಕ್ವಿಂಟಾಲ್ ರಾಗಿಗೆ 3846 ರೂ.ಗಳಿಗೆ ಹಾಗೂ ಜೋಳದ ಎಫ್.ಎ.ಕ್ಯೂ ಗುಣಮಟ್ಟ ಆಧಾರದ ಮೇಲೆ 3180 ರೂ ಬೆಲೆಯನ್ನು ನಿಗಧಿಗೊಳಿಸಲಾಗಿದೆ.ಮಾರುಕಟ್ಟೆ ಬೆಲೆಗಿಂತ 600 ರೂ ಕ್ಕೂ ಹೆಚ್ಚು ಬೆಂಬಲ ಬೆಲೆ ಖರೀದಿ ಕೇಂದ್ರದಲ್ಲಿ ರೈತರಿಗೆ ಸಿಗುತ್ತದೆ .ಖರೀದಿ ಕೇಂದ್ರಕ್ಕೆ ರೈತರ ಸಹಕಾರದೊಂದಿಗೆ ಹೆಚ್ಚು ಮಾರಾಟ ಮಾಡುವ ಮೂಲಕ ಬೆಂಬಲ ಬೆಲೆ ಖರೀದಿ ಕಾರ್ಯ ಯಶಸ್ವಿಯಾಗಲಿ ರೈತರು ಈ ಯೋಜನೆಯನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕು ಧವಸ,ಧಾನ್ಯಗಳ ವರ್ತಕರ ಸಂಘದ ಗೌರವಾಧ್ಯಕ್ಷ ಎಂ.ಶಿವಣ್ಣ, ವರ್ತಕರಾದ ಬಿ.ಚಿನ್ನಾಪ್ರಪ್ಪ, ರಂಗಾ ಶ್ರೀನಿವಾಸ, ಲೋಕೇಶ್, ಎಪಿಎಂಸಿ ಕಾರ್ಯದರ್ಶಿ ಬಸವರಾಜ್ ಸೇರಿದಂತೆ ಸಿಬ್ಬಂದಿ ಇದ್ದರು.




# ಪೊಲೀಸ್ ಅಧಿಕಾರಿಗಳಿಂದ ದಾಳಿ: ಮದ್ಯ ವಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭೆ ಸಾರ್ವತ್ರಿಕ ಚುನಾವಣೆ ಹಿನ್ನಲೆಯಲ್ಲಿ ನೀತಿ ಸಂಹಿತೆ ಜಾರಿಯಾಗಿ ರುವುದರಿಂದ, ಬುಧವಾರದಂದು ಅಬಕಾರಿ ಪೊಲೀಸ್ ಅಧಿಕಾರಿಗಳು ವಿವಿಧೆಡೆ ದಾಳಿ ನಡೆಸಿ ಅಕ್ರಮ ಮದ್ಯ ಸಾಗಾಣಿಕೆ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಲಾಗಿದೆ ಎಂದು ಅಬಕಾರಿ ಉಪ ಆಯುಕ್ತ ಎನ್.ಮಂಜುನಾಥ ಅವರು ತಿಳಿಸಿದ್ದಾರೆ.



ಕಂಪ್ಲಿ ಪಟ್ಟಣದ ಕಂಪ್ಲಿ–ಬಳ್ಳಾರಿ ರಸ್ತೆಯಲ್ಲಿ ರಸ್ತೆಗಾವಲು ಮಾಡುವ ಸಮಯದಲ್ಲಿ ಟಿವಿಎಸ್ ಎಕ್ಸ್‌ಎಲ್ ಸೂಪರ್ ಹೆವಿಡ್ಯೂಟಿ ಕಪ್ಪು ಮತ್ತು ಹಸಿರು ಬಣ್ಣದ ದ್ವಿಚಕ್ರ ವಾಹನದಲ್ಲಿ 17.280 ಲೀ. (ಅಂದಾಜು ಮೌಲ್ಯ ರೂ.27700) ಮದ್ಯ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಸಾವರನನ್ನು ವಶಕ್ಕೆ ಪಡೆದುಕೊಂಡು ಮದ್ಯ ಹಾಗೂ ವಾಹನವನ್ನು ಜಪ್ತು ಮಾಡಿ ಪ್ರಕರಣ ದಾಖಲಿದೆ.

ಕುರುಗೋಡು ತಾಲ್ಲೂಕಿನ ಬಳ್ಳಾರಿ–ಸಿರುಗುಪ್ಪ ಮುಖ್ಯ ರಸ್ತೆಯ ಸೋಮಸಮುದ್ರ ಕ್ರಾಸ್‌ನಲ್ಲಿ ರಸ್ತೆಗಾವಲು ಸಮಯದಲ್ಲಿ ನೋಂದಣಿ ಸಂಖ್ಯೆ ಇಲ್ಲದ ಕಂದು ಬಣ್ಣದ ಟಿವಿಎಸ್ ಎಕ್ಸ್‌ಎಲ್ 100 ಹೆವಿಡ್ಯೂಟಿ ದ್ವಿಚಕ್ರ ವಾಹನದಲ್ಲಿ 38.160 ಲೀ ಮದ್ಯ ಹಾಗೂ 15.600 ಲೀ ಬಿಯರ್ (ಅಂದಾಜು ಮೌಲ್ಯ ರೂ.40940) ಅನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ವಾಹನ ಸಾವರನನ್ನು ವಶಕ್ಕೆ ಪಡೆದುಕೊಂಡು ಮದ್ಯ, ಬಿಯರ್ ಹಾಗೂ ವಾಹನವನ್ನು ಜಪ್ತುಮಾಡಿ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA